
www.buntsanghablr.com

ಡಿಸೆಂಬರ್ 2016 ಸಂಪುಟ 12 ಸಂಚಿಕೆ 12





# ಸ್ನೇಹ ಚಿಂತನೆ

ಮಾಸ ಪತ್ರಿಕೆ














**BUNTS' SANGHA BANGALORE**
(A Charitable Institution)
324, Chord Road, Vijayanagar, Bengaluru - 560 040.
P : 080 - 2339 9323 / 2339 9635 E: info@buntsanghablr.com

ಸಂಚಿಕೆ ಬೆಲೆ ರೂ. 1/-


Swathi
GROUP
Variety is the spice of life!
Merry Christmas
&
Happy New Year 2017
ಸ್ವಾತಿ
ಗ್ರೂಪ್
May this Christmas end the Present Year on a Cheerful note and make way for a Bright New Year
Call @ : +91 95909 02424
www.swathigroup.co.in

ADVT

# ಸ್ನೇಹ ಚಿಂತನೆ

***Monthly Magazine Published by***

**BUNTS' SANGHA BANGALORE**

**VOL. 12 DECEMBER 2016 ISSUE 12**



**ಸಾಹಿತ್ಯ - ಪ್ರಕಾಶನ ಸಮಿತಿ**

ಅಧ್ಯಕ್ಷರು :
**ಎಸ್. ಅಶೋಕ್‌ಕುಮಾರ್ ಶೆಟ್ಟಿ**

ಗೌ॥ ಸಂಪಾದಕರು:
**ರವಿರಾಜ್ ಎಸ್. ಶೆಟ್ಟಿ**

ಸಲಹಾ ಮಂಡಳಿ:
**ಶ್ರೀ ಬಿ.ಎಲ್.ಎನ್. ಹೆಗ್ಡೆ**
**ಶ್ರೀ ಎ. ಗಿರೀಶ್ ರೈ**
**ಶ್ರೀ ಎಂ. ರತ್ನಾಕರ್ ಶೆಟ್ಟಿ**
**ಶ್ರೀ ಸಂತೋಷ್ ಶೆಟ್ಟಿ**

ಸಂಪಾದಕರ ಮಂಡಳಿ:
**ಶ್ರೀ ಎನ್. ಗೋಪಾಲ ಶೆಟ್ಟಿ**
**ಶ್ರೀ ಚಂದ್ರಶೇಖರ್ ಆಳ್ವ**
**ಶ್ರೀ ಪ್ರಕಾಶ್ ಶೆಟ್ಟಿ ಎಂ**
**ಶ್ರೀಮತಿ ರಾಜಶ್ರೀ. ಕೆ. ಶೆಟ್ಟಿ**

ಪೋಷಕ ಸದಸ್ಯರು:
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಪಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜಿ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು
**ಸಂತೋಷ್ ಶೆಟ್ಟಿ ಜಿ**


ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ಕಾನೂನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕ**

## ಈ ಸಂಚಿಕೆಯಲ್ಲಿ...


| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌ॥ ಕಾರ್ಯದರ್ಶಿ ವರದಿ | 4 |
| 4. | ಅವಿಸ್ಮರಣೀಯ ದೀಪಾವಳಿ ಹಬ್ಬ | 5 |
| 5. | "ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ" ವಾರ್ಷಿಕ ಕ್ರೀಡಾಕೂಟ | 7 |
| 6. | ಧಾರ್ಮಿಕವಾಗಿ ದಾರಿ ತಪ್ಪುತ್ತಿದ್ದೇವೆಯೇ...? | 9 |
| 7. | ಸರಳ ಮದುವೆ | 11 |
| 8. | Mind-and Quantum Healing | 14 |
| 9. | ಬೆಂಗಳೂರು ನಗರದ ವಾಹನ ದಟ್ಟಣೆ ಹಾಗೂ ವಾಯುಮಾಲಿನ್ಯ | 17 |
| 10. | ಮಕ್ಕಳ ಫೋಟೊ ಸ್ಪರ್ಧೆ | 26 |
| 11. | ಎಲ್ಲಿ ಹೋಯಿತು ಬಂಟರ ಸಂಸ್ಕೃತಿ? | 36 |
| 12. | Report on Annual Athletic Meet | 41 |
| 13. | 'Spoorthy'-Cultural Competitions | 42 |
| 14. | ಆರ್.ಎನ್.ಎಸ್. ವಿದ್ಯಾನಿಕೇತನ–ರಾಜ್ಯೋತ್ಸವ ಆಚರಣೆ | 43 |
| 15. | Matrimonial | 48 |


### ಮುಖಪುಟ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ
ಕನ್ನಡ ರಾಜ್ಯೋತ್ಸವ ಆಚರಣೆ ಹಾಗೂ
ರಜತ ಮಹೋತ್ಸವ ಪ್ರಯುಕ್ತ ಯೋಧರಿಗೆ ಮತ್ತು
ವಿವಿಧ ಕ್ಷೇತ್ರದಲ್ಲಿನ ಸಾಧಕರಿಗೆ ಸನ್ಮಾನ
ಮುದ್ದುಕಂದ ಮಕ್ಕಳ ಫೋಟೊ ಸ್ಪರ್ಧೆ ವಿಜೇತರು



# ಸಂಪಾದಕೀಯ

ಸಂಪಾದಕೀಯ

8 ನವೆಂಬರ್ 2016 ನಮ್ಮ ದೇಶದ ಚರಿತ್ರೆಯಲ್ಲಿಯೇ ಒಂದು ಮಹತ್ವದ ದಿನ. ಎಲ್ಲರಿಗೂ ಗೊತ್ತಿರುವ ಆದರೆ ಅನುಷ್ಠಾನಕ್ಕೆ ತರಲು ಯಾರೂ ಧೈರ್ಯತೋರದ ಅಚ್ಚರಿಯ ನಿರ್ಧಾರವನ್ನು ಪ್ರಧಾನಿ ಮೋದಿ ಆ ರಾತ್ರಿ ಘೋಷಿಸಿದರು. 500 ಹಾಗೂ 1000 ರೂಪಾಯಿ ಮುಖಬೆಲೆಯ ನೋಟುಗಳನ್ನು ರದ್ದುಗೊಳಿಸುವ ದಿಟ್ಟ ನಿರ್ಧಾರ ಪ್ರಕಟಿಸಿದರು. ದೇಶದ ಆರ್ಥಿಕತೆಗೆ ಸವಾಲಾಗಿರುವ ಕಪ್ಪುಹಣ ಮತ್ತು ಖೋಟಾ ನೋಟಿನ ಪಿಡುಗಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ದೃಢ ನಿರ್ಧಾರ ಕೈಗೊಂಡಿರುವುದು ಸ್ವಾಗತಾರ್ಹ. ಯಾವ ಪೂರ್ವ ಸೂಚನೆಯೂ ನೀಡದೆ ಏಕಾಏಕಿ ಪ್ರಕಟಿಸಿದ ನಿರ್ಧಾರ ಒಂದು ಕ್ರಾಂತಿಕಾರಕ ಹೆಜ್ಜೆ. ಭಾರತದ ಅರ್ಥ ವ್ಯವಸ್ಥೆಯನ್ನು ಸರಿದಾರಿಗೆ ತರಲು ಇಂತಹ ನಿರ್ಣಾಯಕ ಹೊಡೆತದ ಅವಶ್ಯಕತೆ ಖಂಡಿತವಾಗಿಯೂ ಇತ್ತು. ಪಕ್ಷ ಭೇದವಿಲ್ಲದೆ ಎಲ್ಲಾ ರೀತಿಯ ಹಿತಾಸಕ್ತಿಗಳನ್ನು ಎದುರು ಹಾಕಿಕೊಳ್ಳುವ ಪ್ರಧಾನಿಯವರ ಈ ಕ್ರಮ ಸದೃಢ ಭಾರತ ನಿರ್ಮಾಣ ಸಂಕಲ್ಪದ  ಅವರ ಇಚ್ಛಾಶಕ್ತಿಗೆ ಸಾಕ್ಷಿ.

ದೃಢ ನಿರ್ಧಾರ ಕೈಗೊಳ್ಳುತ್ತೇವೆ ಹಾಗೂ ಉತ್ತಮ ಆಡಳಿತ ನೀಡುತ್ತೇವೆ ಎಂಬುದು ನರೇಂದ್ರ ಮೋದಿಯವರು ದೇಶವಾಸಿಗಳಿಗೆ ನೀಡಿದ ಭರವಸೆಗಳು. ರಾಜಕೀಯ ಕುಟುಂಬದ ಹಿನ್ನೆಲೆ ಇಲ್ಲದೆ ಕೇವಲ ಅರ್ಹತೆ ಆಧಾರದ ಮೇಲೆ ಈ ಹಂತ ತಲುಪಿ ಮತ್ತದ್ಧಿ ಜನನಾಯಕನಾಗಿ ಹೊರಹೊಮ್ಮಿ, ದೇಶ ವಿದೇಶಗಳಲ್ಲಿಯೂ ಹಾಡಿಹೊಗಳುವ ಸಮರ್ಥ ಪ್ರಧಾನಿಯನ್ನು ಪಡೆದಿರುವುದು ನಮ್ಮ ಹೆಮ್ಮೆ. ಜನಸಾಮಾನ್ಯರ ಮೆಚ್ಚುಗೆಯ ಪ್ರತಿಕ್ರಿಯೆ ಇದ್ದರೂ ಸದ್ಯದ ಸಮಸ್ಯೆ, ಅಡಚಣೆಗಳನ್ನು ದೇಶಕ್ಕಾಗಿ ತಾಳ್ಮೆಯಿಂದ ಸಹಿಸಿಕೊಳ್ಳಬೇಕಾಗಿದೆ. ಒಂದು ಉತ್ತಮ ಉದ್ದೇಶಕ್ಕಾಗಿ ಕೈಗೊಂಡ ಈ ನಿರ್ಧಾರವನ್ನು ಸ್ವಾಗತಿಸಿ ಸಹಕರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಎಲ್ಲವೂ ನಿರೀಕ್ಷೆಯಂತೆ ನಡೆದರೆ ಕಪ್ಪುಹಣದ ವಿರುದ್ಧ ಘೋಷಿಸಿರುವ ಈ ಸಮರದ ಫಲಿತಾಂಶ ಭವಿಷ್ಯದಲ್ಲಿ 'ಉತ್ತಮ ದಿನ'ಗಳನ್ನು ಸೃಷ್ಟಿಸುವ ಸೂಚನೆಗಳು ಕಾಣುತ್ತಿವೆ. ಉಜ್ವಲ ಭಾರತ ನಿರ್ಮಾಣದಲ್ಲಿ ಪ್ರಧಾನಿಯೊಂದಿಗೆ ನಾವೆಲ್ಲರೂ ಜೊತೆಯಾಗಿ ಹೆಜ್ಜೆ ಹಾಕೋಣ.


ಚುನಾವಣೆಯ ಗೆಲುವೊಂದೇ ನಾವು ಹೊಂದುವ ಪದವಿಗೆ ಅರ್ಹತೆಯ ಮಾನದಂಡವಾಗಲಾರದು. ಸ್ಥಾನ ಅಲಂಕರಿಸಿದ ಮೇಲೆ ಅದರ ಜವಾಬ್ದಾರಿ ಮತ್ತು ಹೊಣೆಗಾರಿಕೆಯ ನಿರ್ವಹಿಸುವುದರ ಮೂಲಕ ನಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಬೇಕು. ತಡ ನಿರ್ಧಾರ ಹಾಗೂ ನಿರ್ಧಾರವೇ ಇಲ್ಲದಿರುವುದು ದುರ್ಬಲ ನಾಯಕತ್ವದ ಸಂಕೇತ. ದಿನನಿತ್ಯದ ಕಾರ್ಯಚಟುವಟಿಕೆಗಳನ್ನು ಇನ್ನಷ್ಟು ವೈಭವೀಕರಿಸಿ ನಡೆಸುವುದು ನಮ್ಮ ಅಜೆಂಡಾ ಆಗಬಾರದು. ದೀರ್ಘಕಾಲೀನ ಚಿಂತನೆಯ ಯೋಜನೆಗಳ ನೀಲನಕ್ಷೆಯೊಂದಿಗೆ ಕಾಲಮಿತಿಯಲ್ಲಿ ಕಾರ್ಯಗತಗೊಳಿಸುವ ಧ್ಯೇಯ ನಮ್ಮ ಆದ್ಯತೆಯಾಗಬೇಕು. ನಮ್ಮ ಆಯ್ಕೆ ಒಂದು ಸದಾವಕಾಶ ಎಂದು ತಿಳಿಯಬೇಕು. ಅದು 'ಹಾಗೆಸುಮ್ಮನೆ' ಎಂತಾಗಬಾರದು. ನಮ್ಮ ಕಾರ್ಯವೈಖರಿ ನಮ್ಮನ್ನು ಆಯ್ಕೆ ಮಾಡಿದವರು ಹೆಮ್ಮೆಪಡುವಂತಿರಬೇಕು.

ಹೊಸ ನೋಟು ಪಡೆದುಕೊಳ್ಳುವ ಧಾವಂತ–ಪರದಾಟಗಳ ಮಧ್ಯೆಯೇ ವರ್ಷ ಮುಗಿಯುತ್ತಲಿದ್ದು, ಹೊಸ ವರ್ಷಾರಂಭದಲ್ಲಿ ಅವಶ್ಯ ನಿರ್ಣಯಗಳನ್ನು ಕೈಗೊಳ್ಳುವ ಸಮಯ. ಹೊಸ ವರ್ಷದಲ್ಲಿ ನಿಮ್ಮ ಹೊಸ ಭರವಸೆ, ಕನಸು, ಗುರಿ ಗಳ ಜೊತೆಗೆ ನಿಮ್ಮ ಯೋಜನೆ, ಸಂಕಲ್ಪಗಳು ಮೂರ್ತರೂಪ ಪಡೆಯಲಿ.

ವಂದನೆಗಳೊಂದಿಗೆ,

**ರವಿರಾಜ್ ಎಸ್. ಶೆಟ್ಟಿ**

Email: ravidanis@gmail.com



# ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ,

ನಡೆದು ಬಂದ ದಾರಿಯನ್ನು ಹಿಂತಿರುಗಿ ನೋಡಿದಾಗ ಕಾಣ ಸಿಗುವುದು, ಸಂತೃಪ್ತಿ ಹಾಗೂ ಸಮಾಧಾನಕರ ಬೆಳವಣಿಗೆಗೆ ಕಟಿಬದ್ಧವಾಗಿ ನಿಂತ ಶೈಕ್ಷಣಿಕ ಕ್ಷೇತ್ರ ಸುಮಾರು 25 ಸಂವತ್ಸರಗಳ ಹಿಂದೆ ದಿ| ಕೆ.ಪಿ ರಾಮಣ್ಣ ಶೆಟ್ಟಿಯವರ ಪ್ರೇರಣೆ, ಅಂದಿನ ಅಧ್ಯಕ್ಷರಾಗಿದ್ದ ಶ್ರೀನಿವಾಸ ಆಳ್ವರ ದೂರದೃಷ್ಟಿಯ ಫಲವಾಗಿ ಬಂಟರ ಸಂಘದ ಭೋಜನ ಗೃಹದಲ್ಲಿ ಪ್ರಾರಂಭವಾದ ಶಾಲೆ, ಇಂದು 25ನೇ ವರ್ಷದಲ್ಲಿ ಬೆಳ್ಳಿಹಬ್ಬವನ್ನು ಆಚರಿಸಿತ್ತಾ ತನ್ನ ಕಂಪನ್ನು ಪಸರಿಸುತ್ತಿದೆ. ನಾವು ವರ್ಷದಿಂದ ವರ್ಷಕ್ಕೆ ಬೆಳೆದ ರೀತಿ, ನಮ್ಮ ಶೈಕ್ಷಣಿಕ ಪ್ರಗತಿಗೆ ಹೊಸ ಕಟ್ಟಡದ ನಿರ್ಮಾಣ. ನಂತರದಲ್ಲಿ ಶೈಕ್ಷಣಿಕ ಚಟುವಟಿಕೆಗಳು ಹೊಸ ಯೋಜನೆಗಳು, ಜಾಗ ಖರೀದಿ, ಕೊಡುಗೈ ದಾನಿ ಡಾ|ಆರ್.ಎನ್ ಶೆಟ್ಟಿಯವರ ಉದಾರತೆ, ಕೀರ್ತಿಶೇಷ ಬಿ.ಎಂ.ಜಯರಾಮ ಶೆಟ್ಟಿಯವರ ಅಧ್ಯಕ್ಷೀಯ ಅವಧಿಯಲ್ಲಿ ಹೊಸ ಕಟ್ಟಡಗಳ ನಿರ್ಮಾಣ ಎಲ್ಲಾ ಬೇಕು ಬೇಡಗಳ ತುಲನೆ ಪರಿವರ್ತನೆ ಇಂದು 4000 ವಿಧ್ಯಾರ್ಥಿಗಳಿಗೆ ಆಶ್ರಯ ತಾಣ, ವಿದ್ಯಾದೇಗುಲ ನಿರಂತರ ಉತ್ತಮ ಫಲಿತಾಂಶದ ಜತೆಗೆ, ವಿಜಯನಗರದಲ್ಲಿ ಅಗ್ರ ಪಂಕ್ತಿಯಲ್ಲಿರುವ ವಿದ್ಯಾ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ಗಳಿಸಿರುವುದು ತಮಗೆಲ್ಲಾ ತಿಳಿದ ವಿಚಾರ. ಇಂತಹ ಮಹಾನ್ ಕೊಡುಗೆ ನೀಡಿದ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾ ಸಂಸ್ಥೆ ಮುಂಬರುವ ಜನವರಿ ತಿಂಗಳ 11,12,13 ರಂದು ಬೆಳ್ಳಿಹಬ್ಬವನ್ನು ಆಚರಿಸುತ್ತಿದೆ. ನಮ್ಮ ಪ್ರಗತಿಗೆ ನೀರೆರೆದ ಎಲ್ಲಾ ಆಡಳಿತ ಮಂಡಳಿ ಹಾಗೂ ಅಧ್ಯಾಪಕ ವೃಂದವನ್ನು ಅಭಿನಂದಿಸುತ್ತೇವೆ. ದಿನಾಂಕ 22.11.2016 ರಂದು ಜಸ್ಟೀಸ್ ಎನ್. ಸಂತೋಷ್ ಹೆಗ್ಡೆ, ಇನ್ಫೋಸಿಸ್ ಫೌಂಡೇಶನ್‌ನ ಶ್ರೀಮತಿ ಸುಧಾಮೂರ್ತಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆಯ ಕನ್ನಡ ರಾಜ್ಯೋತ್ಸವ ಹಾಗೂ ಸೈನಿಕರ ಅಭಿನಂದನೆಯಲ್ಲಿ ಪಾಲ್ಗೊಂಡರು.

ಇನ್ನು ಚಟುವಟಿಕೆಗಳತ್ತ ಕಣ್ಣುಹಾಯಿಸಿದಾಗ ಹಳೆಬೇರು, ಹೊಸಚಿಗುರು ಕೂಡಿರಲು ಮರಸೊಬಗು ಎಂಬ ಹಾಗೆ ನಮ್ಮ ಕಾರ್ಯಕಾರಿ ಸಮಿತಿ ಕಾರ್ಯನಿರ್ವಹಿಸುತ್ತಿದೆ. ಶೈಕ್ಷಣಿಕ ಕ್ಷೇತ್ರಕ್ಕೆ ಒತ್ತು ನೀಡಿ ಸ್ಕಾಲರ್‌ಶಿಪ್ ಸಮಿತಿ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಯುವ ನಾಯಕ ರಮಿತ್ ಬಿ. ಶೆಟ್ಟಿಯವರು ಬಹಳಷ್ಟು ಪ್ರಯತ್ನ ಪಡುತ್ತಿದ್ದಾರೆ. ವಿವಾಹ ವೇದಿಕೆ ಚೇರ್‌ಪರ್ಸನ್ ಶ್ರೀಮತಿ ಶಕಿಲಾ ಎಸ್. ಶೆಟ್ಟಿಯವರು ಕ್ರೀಯಾಶೀಲ ಹಾಗೂ ನಿರಂತರ ಚಟುವಟಿಕೆಯಲ್ಲಿ ತೊಡಗಿದ್ದುಕೊಂಡು ಇದೇ ತಿಂಗಳ 18ರ ಕಾರ್ಯಕ್ರಮಕ್ಕೆ ಅಣಿಯಾಗಿದ್ದಾರೆ.

ಈ ಬಾರಿ ಶ್ರೀ ರಾಧಾಕೃಷ್ಣ ಶೆಟ್ಟಿಯವರ ಸಮಾಜ ಸೇವಾ ವಿಭಾಗ ಹಮ್ಮಿಕೊಂಡ ಹೊಸ ಯೋಜನೆ ಜೀವನಕ್ಕಾಗಿ ಕಾಮಧೇನು ಯುವ ವಿಭಾಗದ ಸಾಂಸ್ಕೃತಿಕ ಕಾರ್ಯಕ್ರಮ, ವೈದ್ಯಕೀಯ ವಿಭಾಗದ ರಕ್ತದಾನ, ಹೀಗೆ ಪ್ರೇರಕವೂ ಪೂರಕವೂ ಆದ ಚಟುವಟಿಕೆಗಳು ನಡೆಯುತ್ತಾ ಬಂದಿವೆ, ಬರಲಿವೆ.

ಕಳೆದ ನಿನ್ನೆಗಳು–ಸುಂದರ ನಾಳೆಗಳ ಕನಸುಗಳು–ಮನ ಪಟಲದಲ್ಲಿ ಹಾದು ಹೋದಾಗ ಕನಸುಗಾರನ ಯೋಜನೆಗಳು ಯೋಜನೆಗಳಾಗಿ ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನು ತಲುಪಬೇಕೆಂಬ ಏಕೈಕ ನಿಲುವು ನಮ್ಮದು. ಈ ನಿಟ್ಟಿನಲ್ಲಿ ಒಂದು ತಿಂಗಳ ಅವಧಿಯಲ್ಲಿ ಸುಮಾರು 23 ಲಕ್ಷ ನಿಧಿ ಹರಿದು ಬಂದಿದೆ. ದೀಪಾವಳಿ ಹಬ್ಬದ ಆಚರಣೆಯ ಶುಭ ಅವಸರದಲ್ಲಿ, ಮುಖ್ಯ ಅತಿಥಿಯಾಗಿ ಆಗಮಿಸಿದ ಮಾನ್ಯ ಮುಖ್ಯ ಮಂತ್ರಿಗಳ ಸಂಸದೀಯ ಕಾರ್ಯದರ್ಶಿಗಳು ಹಾಗೂ ಎಂ.ಎಲ್.ಸಿ ಆಗಿರುವ ಶ್ರೀ ಕೆ. ಗೋವಿಂದರಾಜ್‌ರವರು ನಮ್ಮ ಸಂಘದ ಚಟುವಟಿಕೆಗಳನ್ನು ಮೆಚ್ಚಿಕೊಂಡು 10 ಲಕ್ಷ ರೂ.ಗಳನ್ನು ದಾನ ರೂಪದಲ್ಲಿ ನೀಡಿರುತ್ತಾರೆ. ಮರೆಯಲಾರದ ಮರೆಯಬಾರದ ವ್ಯಕ್ತಿಗಳ ಸಾಲಿನಲ್ಲಿ ಕೀರ್ತಿಶೇಷ ಡಾ| ನಾಗಪ್ಪ ಆಳ್ವರು ಹಳೆಯ ತಲೆಮಾರಿನಲ್ಲಿ ಬಂಟ ಬಂಧುಗಳಿಗೆ ಸಹಾಯ ಹಸ್ತವನ್ನು ನೀಡಿದವರಲ್ಲಿ ಅಗ್ರ ಪಂಕ್ತಿಯಲ್ಲಿ ಕಾಣಸಿಗುತ್ತಾರೆ. ಅವರ ಸುಪುತ್ರ ಶ್ರೀ ಕೆ. ಮೋಹನ ದೇವ ಆಳ್ವರು 10 ಲಕ್ಷ ರೂ.ಗಳ ದೇಣಿಗೆಯನ್ನು ಶೈಕ್ಷಣಿಕವಾಗಿ ಬಳಸಬೇಕೆಂದು ನೀಡಿರುತ್ತಾರೆ. ಶ್ರೀಮತಿ ಪ್ರೇಮಾ ಬಾಲಕೃಷ್ಣ ಶೆಟ್ಟಿಯವರು ರೂ. 3 ಲಕ್ಷ ದೇಣಿಗೆ ನೀಡಿರುತ್ತಾರೆ. ಈ ಮೂರು ಮಹನೀಯರಿಗೆ ನಮ್ಮ ನಿಮ್ಮೆಲ್ಲರ ಪರವಾಗಿ ಆಭಾರಿಯಾಗಿರುತ್ತೇನೆ.

'ಮನ ಏವ ಮನುಷ್ಯಾಣಂ, ಕಾರಣಂ ಬಂಧಮೋಕ್ಷಮೇ' ಎಲ್ಲದಕ್ಕೂ ನಿರ್ಮಲ ಮನಸ್ಸೇ ಕಾರಣ. ಅಂತಹ ಮನಸ್ಸು ನಮ್ಮದಾಗಿರಲಿ, ಆಗ ಮಾತ್ರ ಸಹೃದಯಿ ಸಮಾಜ ನಿರ್ಮಾಣ ಸಾಧ್ಯ. ಎಲ್ಲಾ ಬೆರಳುಗಳು ಒಂದೇ ರೀತಿಯ ಅಳತೆಯನ್ನು ಹೊಂದಿಲ್ಲ, ಆದರೆ ಅವು ಬಾಗಿ ನಿಂತರೆ ಎಲ್ಲವೂ ಸಮನಾದೀತು. ಬದುಕಿನಲ್ಲಿ ಹಾಗೆ ನಾವು ಬಾಗುವುದಾದರೆ ಮತ್ತು ಸನ್ನಿವೇಶಗಳಿಗೆ ಹೊಂದಿಕೊಳ್ಳುವುದಾದರೆ ಬದುಕು ತುಂಬಾ ಸರಳ. ನಮ್ಮ ನಿಮ್ಮ ಚಿಂತನೆ ಈ ದಿಶೆಯಲ್ಲಿರಲಿ ಎಂಬ ಆಶಯದೊಂದಿಗೆ ಹೃದಯ ಪೂರ್ವಕ ವಂದನೆಗಳು.

**ಚಂದ್ರಹಾಸ ರೈ ಡಿ.**
ಅಧ್ಯಕ್ಷರು



# ಗೌರವ ಕಾರ್ಯದರ್ಶಿಗಳ ವರದಿ

ಗೌರವಾನ್ವಿತ ಸದಸ್ಯರೇ,

ತುಳುನಾಡಿನ ಕಲೆ–ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗುವ ನಿಟ್ಟಿನಲ್ಲಿ ದೀಪಾವಳಿ ಹಬ್ಬದ ಸಂಭ್ರಮಾಚರಣೆಯನ್ನು ದಿನಾಂಕ 05.11.2016 ರಂದು ಸಂಘದಲ್ಲಿ ಅದ್ದೂರಿಯಿಂದ ಆಚರಿಸಲಾಯಿತು. ವಿಭಿನ್ನ ಚಿಂತನೆಯೊಂದಿಗೆ ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯರು ಹಾಗೂ ಮಾನ್ಯ ಮುಖ್ಯಮಂತ್ರಿಯವರ ಸಂಸದೀಯ ಕಾರ್ಯದರ್ಶಿಗಳಾದ ಶ್ರೀ ಕೆ.ಗೋವಿಂದರಾಜ್‌ರವರು ಭಾಗವಹಿಸಿ ಬಂಟರ ಸಾಮಾಜಿಕ ಕಳಕಳಿ ಹಾಗೂ ಸಂಸ್ಕೃತಿಯ ಉಳಿವಿಗಾಗಿನ ಕೊಡುಗೆಯನ್ನು ಶ್ಲಾಘಿಸಿ ಸಂಘದ ಭವಿಷ್ಯದ ಯಾವುದೇ ಸಾಮಾಜಿಕ ಕಳಕಳಿಯ ಅಥವಾ ಕ್ರೀಡಾ ಕ್ಷೇತ್ರದ ಕಾರ್ಯಯೋಜನೆಗಳಿಗೆ ತಮ್ಮ ನಿಧಿಯಿಂದ 10 ಲಕ್ಷ ರೂ.ಗಳನ್ನು ನೀಡುವುದಾಗಿ ಘೋಷಿಸಿದರು. ಗೌರವಾತಿಥ್ಯವನ್ನು ಸ್ವೀಕರಿಸಿದ ಇಎಸ್‌ಐಸಿ ಮೆಡಿಕಲ್ ಕಾಲೇಜಿನ ನಿವೃತ್ತ ಡೀನ್ ಡಾ. ಬಿ. ರಾಜೀವ ಶೆಟ್ಟಿಯವರು ತಮ್ಮ ಸಾಧನೆಯ ಶಕ್ತಿಯಾದ ಬಂಟ ಸಮಾಜಕ್ಕೆ ಈ ಗೌರವವನ್ನು ಸಮರ್ಪಿಸುವುದಾಗಿ ತಿಳಿಸಿದರು.

ನವೆಂಬರ್ ತಿಂಗಳ 10, 11 ಮತ್ತು 12ರಂದು ಮಹಿಳಾ ವಿಭಾಗದವರು ಮೂರು ದಿನಗಳ ಕಸೂತಿ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡು ಹೆಚ್ಚಿನ ಸಂಖ್ಯೆಯ ಸಮಾಜ ಬಾಂಧವರಿಗೆ ಸ್ವ–ಉದ್ಯೋಗ ತರಬೇತಿಯೊಂದಿಗೆ ಆರ್ಥಿಕ ಸಬಲೀಕರಣಕ್ಕೆ ಅನುವು ಕಲ್ಪಿಸುವ ಅಮೂಲ್ಯ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ 2016–17 ನ್ನು ದಿನಾಂಕ 13.11.2016 ರಂದು ಸಾಯಿ ಕ್ರೀಡಾಂಗಣದಲ್ಲಿ ಯಶಸ್ವಿಯಾಗಿ ಆಯೋಜಿಸಿ ಅತೀ ಹೆಚ್ಚಿನ ಸಂಖ್ಯೆಯ ಬಂಟ ಬಾಂಧವರು ಎಲ್ಲಾ ವಿಭಾಗದಲ್ಲಿ ಅದರಲ್ಲೂ ಕಿರಿಯ ವಿಭಾಗದಲ್ಲಿ ಭಾಗವಹಿಸಿ ಇತಿಹಾಸ ನಿರ್ಮಿಸಿದರು. ಕ್ರೀಡಾಕೂಟವನ್ನು ರಾಷ್ಟ್ರೀಯ ಕ್ರೀಡಾ ಸಾಧಕ ಅಭಿಷೇಕ್ ಶೆಟ್ಟಿ ಉದ್ಘಾಟಿಸಿ ಶುಭ ಹಾರೈಸಿದರು. 20.11.2016 ರಂದು ಸಂಘದ ಸಂಕೀರ್ಣದಲ್ಲಿ ಚೆಸ್, ಕೇರಂ ಹಾಗೂ ಟೆನ್ನಿಕ್ವಾಟ್ ಪಂದ್ಯಾಟಗಳನ್ನು ಹಾಗೂ 27.11.2016 ರಂದು ಮಲ್ಲೇಶ್ವರಂ ಕೆನರಾ ಯೂನಿಯನ್‌ನಲ್ಲಿ ಶಟಲ್ ಬ್ಯಾಡ್ಮಿಂಟನ್ ಪಂದ್ಯಾಟವನ್ನು ಅತ್ಯಂತ ಶಿಸ್ತಿನಿಂದ ಯಶಸ್ವಿಯಾಗಿ ಆಯೋಜಿಸಲಾಗಿತ್ತು.

ದಿನಾಂಕ 26.11.2016 ರಂದು ಗ್ರಾಮೀಣ ಪ್ರದೇಶವಾದ ಬಾಳೆಹೊನ್ನೂರು ಬಂಟರ ಸಂಘದಲ್ಲಿ ಶಿಕ್ಷಣದಲ್ಲಿ ಅತ್ಯುನ್ನತ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಆರ್ಥಿಕವಾಗಿ ಸ್ವಾವಲಂಬನೆ ಬಯಸಿರುವ ಸಮಾಜದ ಮಹಿಳೆಯರಿಗೆ ಹೊಲಿಗೆ ಯಂತ್ರದ ಫಲಾನುಭವವನ್ನು ಬೆಂಗಳೂರು ಬಂಟರ ಸಂಘದ ವತಿಯಿಂದ ವಿತರಿಸಲಾಯಿತು.

ಸಂಘದ ಶಾಲೆಯಲ್ಲಿ ನವೆಂಬರ್ ತಿಂಗಳಿನಲ್ಲಿ ವಿವಿಧ ಕಾರ್ಯಚಟುವಟಿಕೆಗಳು ಅವಿರತವಾಗಿ ನಡೆದವು. ದಿನಾಂಕ 22.11.2016 ರಂದು ನಡೆದ ಬಂಟರ ಸಂಘ ಆರ್. ಎನ್. ಎಸ್ ವಿದ್ಯಾನಿಕೇತನದ ಬೆಳ್ಳಿ ಹಬ್ಬದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು. ಅವಿಸ್ಮರಣೀಯ ಕಾರ್ಯಕ್ರಮವಾಗಿ ದಾಖಲಾದ ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಗೌರವಿಸಲಾಗಿತ್ತು. ವಿಶೇಷವಾಗಿ ದೇಶದ ರಕ್ಷಣಾ ಕ್ಷೇತ್ರದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ತಮ್ಮ ಪ್ರಾಣದ ಹಂಗನ್ನು ತೊರೆದು ದೇಶ ಸೇವೆಗೈದ ವೀರ ಸೇನಾನಿಗಳನ್ನು ಅಭಿನಂದಿಸಲಾಯಿತು. ಶಾಲಾಡಳಿತ ಮಂಡಳಿಯ ಚೇರ್‌ಮೆನ್ ಡಾ| ಆರ್.ಎನ್ ಶೆಟ್ಟಿಯವರು ಉಪಸ್ಥಿತರಿದ್ದು, ಮುಖ್ಯ ಅತಿಥಿಗಳಾಗಿ ನ್ಯಾಯಮೂರ್ತಿ ಹಾಗೂ ನಿವೃತ ಲೋಕಾಯುಕ್ತ ಶ್ರೀ ಸಂತೋಷ್ ಹೆಗ್ಡೆ ಹಾಗೂ ಗೌರವ ಅತಿಥಿಗಳಾಗಿ ಇನ್ಫೋಸಿಸ್ ಫೌಂಡೇಶನ್‌ನ ಸಂಸ್ಥಾಪಕರಾದ ಶ್ರೀಮತಿ ಸುಧಾ ಮೂರ್ತಿಯವರು ಭಾಗವಹಿಸಿದ್ದರು. ದಿನಾಂಕ 11.11.2016 ರಂದು ಆಯೋಜಿಸಿದ ಅಂತರ್ ಶಾಲಾ ಸ್ಪರ್ಧೆ Quizaart ನಲ್ಲಿ ನಗರದ 23 ಕ್ಕೂ ಮಿಕ್ಕಿ ಶಾಲೆಗಳ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದರು. ರಾಜ್ಯಮಟ್ಟದ ಕರಾಟೆ ಹಾಗೂ ರಾಷ್ಟ್ರೀಯ ಮಟ್ಟದ ಚಿತ್ರಕಲೆ ಹಾಗೂ ಕೈಬರಹದ ಸ್ಪರ್ಧೆಯಲ್ಲಿ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿ ಬಹುಮಾನ ಗಿಟ್ಟಿಸಿಕೊಂಡರು. ವಿದ್ಯಾರ್ಥಿಗಳ ವಾರ್ಷಿಕ ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳು ಅತ್ಯಂತ ಆಸಕ್ತಿಯಿಂದ ಭಾಗವಹಿಸಿದರು. ಮಕ್ಕಳ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಲೆ ಹಾಗೂ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೂ ಹಬ್ಬದೂಟದ ಭೋಜನವನ್ನು ಏರ್ಪಡಿಸಲಾಗಿದ್ದು ವಿದ್ಯಾರ್ಥಿಗಳೆಲ್ಲರೂ ಖುಷಿಯ ಅನುಭವ ಹಂಚಿಕೊಂಡರು.

ಮಹಾಸಭೆಯ ನಿರ್ಧಾರದಂತೆ ನೂತನವಾಗಿ ಖರೀದಿಸಲಾದ ಜಮೀನಿಗೆ ಸಂಬಂಧಿಸಿದ ಕಾನೂನು ಹಾಗೂ ಅಡೆ–ತಡೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಅಗತ್ಯ ದಾಖಲೆಗಳನ್ನು ಸಂಗ್ರಹಿಸುವ ಕಾರ್ಯ ಪ್ರಗತಿಯಲ್ಲಿದೆ. ಆದಷ್ಟು ಶೀಘ್ರದಲ್ಲಿ ಶಾಶ್ವತ ಪರಿಹಾರ ಮಾರ್ಗದ ಸೂತ್ರದೊಂದಿಗೆ ಪೂರ್ಣ ವರದಿಯನ್ನು ತಯಾರಿಸಿ ಸರ್ವ ಸದಸ್ಯರ ಮುಂದಿಡಲಿದ್ದೇವೆ.

ವಂದನೆಗಳೊಂದಿಗೆ

**ಸಂತೋಷ್ ಶೆಟ್ಟಿ ಜೆ.**

ಗೌರವ ಕಾರ್ಯದರ್ಶಿ

# ಅವಿಸ್ಮರಣೀಯ ದೀಪಾವಳಿ ಹಬ್ಬ





ಅಂದು ಶನಿವಾರ, ನವೆಂಬರ್ 5, 2016. ಐನೂರು, ಸಾವಿರ ರೂಪಾಯಿಗಳ ನೋಟುಗಳಿಗೆ ಇನ್ನೂ ಬೆಲೆ ಇತ್ತು. ಮುಂಬರುವ ಬಿರುಗಾಳಿಯ ಬಗ್ಗೆ ಯಾರಿಗೂ ಸೂಚನೆ ಇರಲಿಲ್ಲ. ಇಂಥ ಸುಂದರ ಸಂಜೆಗೆ ಇನ್ನಷ್ಟು ಮೆರುಗು ಬಂದಿದ್ದು ಬೆಂಗಳೂರಿನ ಬಂಟರ ಸಂಘದಲ್ಲಿ. ಅಂದು ಅಲ್ಲಿ ದೀಪಾವಳಿ ದಿನಾಚರಣೆ. ಖುಷಿ ಮುಗಿಲು ಮುಟ್ಟಿದ ಸಂಭ್ರಮ.

ಬಂಟರ ಸಂಘದ ಸಾಂಸ್ಕೃತಿಕ ವಿಭಾಗದ ಚೇರ್‌ಮೆನ್ ಈ ಬಾರಿ ಆಯ್ಕೆಯಾದವರು ಪ್ರಖ್ಯಾತ ಚಲನಚಿತ್ರನಟ, ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ ಶಿವಧ್ವಜ್ ಅವರು. ಮೊದಲೇ ಸಿನಿಮಾದವರು. ಈ ಬಾರಿ ಸಾಂಸ್ಕೃತಿಕ ಕಾರ್ಯಕ್ರಮಗಳು ಚೆನ್ನಾಗಿಯೇ ಇರಬಹುದು ಎಂಬ ನಿರೀಕ್ಷೆ ಸಂಘದ ಸದಸ್ಯರಲ್ಲಿ ಮೂಡಿತ್ತು. ಅಂದಿನ ಸಾಂಸ್ಕೃತಿಕ ಕಾರ್ಯಕ್ರಮಗಳು ಆ ನಿರೀಕ್ಷೆಗೆ ತಕ್ಕುದಾಗಿತ್ತು ಎಂಬುದು ಕಾರ್ಯಕ್ರಮ ವೀಕ್ಷಿಸಿದ ಬಹಳ ಜನರ ಅಭಿಪ್ರಾಯ.

ಆರಂಭದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳಿಗೆ ಸಂಘದ ಮಹಿಳಾ ವಿಭಾಗದ ಸ್ವಯಂ ಸೇವಕರು ಮಂಗಳ ವಾದ್ಯಗಳೊಂದಿಗೆ ಪೂರ್ಣಕುಂಭ ಸ್ವಾಗತ ನೀಡಿದರು. ಅನಂತರ ಸಭಾಕಾರ್ಯಕ್ರಮ ನಡೆಯಿತು. ಸಂಘದ ಅಧ್ಯಕ್ಷರಾದ ದರ್ಖೆ ಚಂದ್ರಹಾಸ ರೈ ಅವರ ಘನ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿದ್ದ ವಿಧಾನ ಪರಿಷತ್ಸದಸ್ಯರು ಹಾಗೂ ಮುಖ್ಯಮಂತ್ರಿಗಳವರ ಸಂಸದೀಯ ಕಾರ್ಯದರ್ಶಿ ಕೆ. ಗೋವಿಂದರಾಜ್ ಅವರು ದೀಪಾವಳಿ ಹಬ್ಬದ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿದರು ಮತ್ತು ಬಂಟರ ಸಮುದಾಯಕ್ಕೆ ಹಬ್ಬದ ಶುಭಾಶಯಗಳನ್ನು ಕೋರಿದರು. ಬೆಂಗಳೂರಿನ ಇಎಸ್‌ಐಸಿ(ESIC) ವೈದ್ಯಕೀಯ ಕಾಲೇಜಿನ ನಿವೃತ್ತ ಡೀನ್ ಡಾ. ರಾಜೀವ್ ಶೆಟ್ಟಿ ಅವರು ಗೌರವ ಅತಿಥಿಗಳಾಗಿದ್ದರು.

ಅನಂತರ ಶುರುವಾಗಿದ್ದು ದಿನದ ಪ್ರಮುಖ ಆಕರ್ಷಣೆ– ಸಾಂಸ್ಕೃತಿಕ ಕಾರ್ಯಕ್ರಮಗಳು. ಮೊದಲನೆಯದಾಗಿ ನಡೆದ 'ರೆಟ್ರೋಬಂಟ್ಸ್' ಎಂಬ ವಿನೂತನ ಕಾರ್ಯಕ್ರಮದ ನೇತೃತ್ವವನ್ನು ಸ್ವತಃ ಶಿವಧ್ವಜ್ ಅವರೇ ವಹಿಸಿದ್ದರು. ಇದರಲ್ಲಿ ಎರಡು ವಿಭಾಗಗಳಿದ್ದವು. ಮೊದಲನೆಯದು ಹಳೇಕಾಲದ ಹಿಂದಿ, ಕನ್ನಡ ಮತ್ತು ತುಳು ಜನಪ್ರಿಯ ಚಿತ್ರಗೀತೆಗಳನ್ನು ಹಾಡುವ ಆರ್ಕೆಸ್ಟ್ರಾ, ಮತ್ತು ಎರಡನೆಯದು ಸದಸ್ಯರಿಗಾಗಿ ಹಳೇಕಾಲದ







ವೇಷಭೂಷಣಗಳ ಸ್ಪರ್ಧೆ. ಈ ಸ್ಪರ್ಧೆಯಲ್ಲಿ 'ಬೆಸ್ಟ್ ಡ್ರೆಸ್ಡ್ ಕಪಲ್', 'ಬೆಸ್ಟ್ ಡ್ರೆಸ್ಡ್ ಮೇಲ್' ಮತ್ತು 'ಬೆಸ್ಟ್ ಡ್ರೆಸ್ಡ್ ಫೀಮೇಲ್' ಎಂಬ ಮೂರು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು. ನಮ್ಮ ಸಂಘದ ಸದಸ್ಯರು ರಾಜ್‌ಕುಮಾರ್, ರಾಜ್‌ಕಪೂರ್, ಮಮ್ಮಾಜ್, ಶರ್ಮಿಳಾಠಾಗೂರ್, ಕಲ್ಪನಾ ಮುಂತಾದವರನ್ನು ಹೋಲುವ ವೇಷಭೂಷಣಗಳಲ್ಲಿ ವೇದಿಕೆಗೆ ಬಂದು ನಕ್ಕುನಲಿದಾಡಿದರು. ಹಿನ್ನೆಲೆಯಲ್ಲಿ ಆ ಕಾಲಮಾನದ ಸಂಗೀತಸುಧೆ ಹರಿದುಬಂತು. ಜನರ ಕರತಾಡನಗಳ ಮಧ್ಯೆ ನಮ್ಮ ಬಂಟ ಮಹಾಶಯರು ತಮ್ಮನ್ನು ತಾವೇ ಮೈಮರೆತರು. ನೆರೆದವರ ಮನಗೆದ್ದರು.

ಈ ಮಧ್ಯೆ, ಶಿವಧ್ವಜ್ ಹಾಗೂ ಇನ್ನೋರ್ವ ಪ್ರಖ್ಯಾತ ಕಲಾವಿದೆ, ಹಲವಾರು ಧಾರಾವಾಹಿಗಳ ಮೂಲಕ ಮನೆಮಾತಾಗಿರುವ ಜ್ಯೋತಿ ರೈ ಅಂದಿನ ಕಾರ್ಯಕ್ರಮಗಳ ನಿರೂಪಕರಾಗಿ ಜನಮನಗೆದ್ದರು. ಹಳೇಕಾಲದ ಪೋಷಾಕಿನಲ್ಲಿದ್ದ ಇಬ್ಬರೂ ಕನ್ನಡ ಮತ್ತು ತುಳು ಭಾಷೆಗಳಲ್ಲಿ ತಿಳಿಯಾದ ಹಾಸ್ಯದ ಮೂಲಕ, ತಮ್ಮ ಭಾವಾಭಿನಯ ಹಾಗೂ ನೃತ್ಯಗಳ ಮೂಲಕ ನೆರೆದಿದ್ದವರನ್ನು ನಕ್ಕುನಲಿಸಿದರು. ಸಂಗೀತ ಕ್ಷೇತ್ರದಲ್ಲಿ ಕಳೆದ 50 ವರ್ಷಗಳಿಂದ ಸತತವಾಗಿ ದುಡಿಯುತ್ತಿರುವ ನಮ್ಮ ಹೆಮ್ಮೆಯ ಬಂಟರಾದ ಸಂತೋಷ್ ಹೆಗ್ಡೆಯವರ ನೇತೃತ್ವದಲ್ಲಿ ಗಾನಲಹರಿ ನಡೆಯಿತು. ಹಲವು ಹಾಡುಗಳು ಜನರಿಗೆ ಗತಕಾಲದ ವೈಭವವನ್ನು ನೆನಪಿಸಿತು.

ನಂತರ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕನ್ನಡಚಲನ ಚಿತ್ರರಂಗದ ಮ್ಯೂಸಿಕ್ ಮಾಂತ್ರಿಕ ಗುರುಕಿರಣ್ ವೇದಿಕೆಗೆ ಬಂದು ಸಂತೋಷ್ ಹೆಗ್ಡೆಯವರು ಸಂಗೀತಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಿ ಅವರನ್ನು ಗೌರವಿಸಿದರು. ಬೆಂಗಳೂರು ಬಂಟರ ಸಂಘದಲ್ಲಿ ಇದೊಂದು ಅವಿಸ್ಮರಣೀಯ ಕಾರ್ಯಕ್ರಮವಾಯಿತು.

ಅನಂತರ ದೂರದರ್ಶನ ಹಾಗೂ ಸಿನಿಮಾ ಕ್ಷೇತ್ರದಲ್ಲಿ ಭಾರೀ ಹೆಸರು ಮಾಡಿರುವ ನಿರ್ದೇಶಕ ವಿನುಬಳಂಜ ಅವರ



ನಿರ್ದೇಶನದಲ್ಲಿ ದೀಪಾವಳಿಯ ವಿಶೇಷಗಳನ್ನೊಳಗೊಂಡ ನೃತ್ಯರೂಪಕ ನಡೆಯಿತು. 'ನರಕಾಸುರವಧೆ' ಮತ್ತು 'ಬಲಿಪರ್ಬ' ಎಂಬ ಎರಡು ರೂಪಕಗಳ ಮೂಲಕ ದೀಪಾವಳಿಯ ಮಹತ್ವವನ್ನು ಸಾರಲಾಯಿತು. ಇದರಲ್ಲಿ ಸಿನಿಮಾ, ಟೆಲಿವಿಷನ್, ನೃತ್ಯ, ಸಂಗೀತ ಮುಂತಾದ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಬಂಟರ ಗಡಣವೇ ಭಾಗವಹಿಸಿತ್ತು. ಪ್ರಖ್ಯಾತ ಚಲನಚಿತ್ರ ನಟರಾದ ಭವ್ಯಶ್ರೀರೈ, ಗುರುಹೆಗ್ಡೆ, ಸಂದೀಪ್ ಹೆಗ್ಡೆ, ದಿಶಾಶೆಟ್ಟಿ ಮತ್ತಿತರರು ನೆರೆದಿದ್ದ ಬಂಟ ಬಾಂಧವರ ಕಣ್ಮನ ಸೆಳೆದರು.

ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆನಂದಿಸಿದವರು ಅನಂತರ ಭರ್ಜರಿ ಊಟವನ್ನೂ ಮಾಡಿ ಮನೆಗೆ ತೆರಳಿದರು. ಬಂಟರ ಸಂಘದಲ್ಲಿ ಬಹುಕಾಲ ನೆನಪಿನಲ್ಲಿಡುವಂಥ ದೀಪಾವಳಿಹಬ್ಬದ ಆಚರಣೆ ಅಂದು ಬೆಂಗಳೂರು ಬಂಟರ ಸಂಘದಲ್ಲಿ ನಡೆಯಿತು.



ವರದಿ : ಪ್ರಕಾಶ್ ರೈ
ಸಂಚಾಲಕರು, ಸಾಂಸ್ಕೃತಿಕ ಸಮಿತಿ



## "ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ"

# ವಾರ್ಷಿಕ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ವರದಿ





ನವೆಂಬರ್ 13ನೇ ಭಾನುವಾರ ಬೆಳಗ್ಗೆ 7 ಗಂಟೆಗೆ ಸಂಘದ ಸದಸ್ಯರೆಲ್ಲರೂ ಸಂಘದ ಸಂಕೀರ್ಣದಲ್ಲಿ ಅತೀ ಉತ್ಸಾಹದಿಂದ ಒಗ್ಗೂಡಿದ್ದರು. ಯಾಕೆಂದರೆ ಅಂದೇ ಎಲ್ಲರೂ ಅತೀ ನಿರೀಕ್ಷೆಯಿಂದ ಕಾಯುತ್ತಿದ್ದ "ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ" ವಾರ್ಷಿಕ ಕ್ರೀಡಾಕೂಟದ ಉದ್ಘಾಟನಾ ದಿನ. ಅಂತರಾಷ್ಟ್ರೀಯ ಕ್ರೀಡಾಪಟು ಅಭಿಷೇಕ ಶೆಟ್ಟಿಯವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ಬೆಳಗಿನ ಉಪಹಾರದ ನಂತರ ವರಸಿದ್ಧಿ ವಿನಾಯಕನಿಗೆ **ಪೂಜೆ ಸಲ್ಲಿಸಿ ಕ್ರೀಡಾದೀಪ ಬೆಳಗಿಸಿಕೊಂಡು ಸರ್ವ** ಸದಸ್ಯರೊಂದಿಗೆ ಮುಖ್ಯ ಅತಿಥಿಗಳು, ಸಂಘದ ಪದಾಧಿಕಾರಿಗಳು ಹಾಗೂ ಕ್ರೀಡಾಸಮಿತಿಯ ಸದಸ್ಯರನ್ನೊಳಗೊಂಡು ಕ್ರೀಡಾಜ್ಯೋತಿಯೊಂದಿಗೆ ತೆರೆದ ವಾಹನದಲ್ಲಿ ಸಾಯಿ ಕ್ರೀಡಾಂಗಣದತ್ತ ತೆರಳಿದರು. ಹಿಂದೆಯೇ ಬಾವುಟಗಳೊಂದಿಗೆ ಯುವ ಬಂಟರ ಬೈಕ್ ರ್‍ಯಾಲಿ, ಸದಸ್ಯರ ಕಾರ್ ರ್‍ಯಾಲಿ ಹಾಗೂ ಚೆಂಡೆ, ವಾದ್ಯಗಳು ಮೆರವಣಿಗೆಗೆ ವಿಶೇಷ ಮೆರುಗು ನೀಡಿತ್ತು.

ಮೊದಲೇ ಸಜ್ಜಾಗಿದ್ದ ವೇದಿಕೆಯಲ್ಲಿ ನಂದೀಶ್‌ರವರ ನಿರೂಪಣೆಯೊಂದಿಗೆ ಸಭಾ ಕಾರ್ಯಕ್ರಮ ಆರಂಭಗೊಂಡಿತು. ಶ್ರೀ ಸುರೇಂದ್ರ ಶೆಟ್ಟಿಯವರು ಗಣ್ಯರನ್ನು ವೇದಿಕೆಗೆ ಸ್ವಾಗತಿಸಿ, ಸರ್ವ ಸದಸ್ಯರು ಹಾಗೂ ನೆರೆದಿರುವವರೆಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಮುಖ್ಯ ಅತಿಥಿಯಾದ ಅಭಿಷೇಕ್ ಶೆಟ್ಟಿಯವರು ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ಕು॥ ಕವನ ಶೆಟ್ಟಿಯವರು ಪ್ರಾರ್ಥನೆ ಮಾಡಿದರು. ಬಂಟ ಕ್ರೀಡಾಪಟುವಾದ ಚರಣ್‌ಶೆಟ್ಟಿಯವರು ಕ್ರೀಡಾ ಜ್ಯೋತಿಯೊಂದಿಗೆ ಕ್ರೀಡಾಂಗಣ ಸುತ್ತಿ ನಂತರ ಕ್ರೀಡಾಜ್ಯೋತಿಯನ್ನು ಅತಿಥಿಗಳಿಗೆ







ಹಸ್ತಾಂತರಿಸಿದರು. ನಂತರ ಆರ್.ಎಸ್.ಎಸ್. ವಿದ್ಯಾನಿಕೇತನದ ವಿದ್ಯಾರ್ಥಿಗಳು ಪಥಸಂಚಲನದೊಂದಿಗೆ ಅತಿಥಿಗಳಿಗೆ ಗೌರವ ಸಲ್ಲಿಸಿದರು. ನಂತರ ವೇದಿಕೆಯಲ್ಲಿ ಮುಖ್ಯ ಅತಿಥಿಗಳ ಕಿರುಪರಿಚಯ ನೀಡಲಾಯಿತು. ಅಧ್ಯಕ್ಷ ಭಾಷಣದಲ್ಲಿ ಚಂದ್ರಹಾಸ ರೈಯವರು ಕ್ರೀಡೆಯ ಅಗತ್ಯತೆ ಬಗ್ಗೆ ತಿಳಿಸಿದರು. ಗೌರವ ಕಾರ್ಯದರ್ಶಿ ಸಂತೋಷ ಜಪ್ತಿಯವರು ಕ್ರೀಡೆಯಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಸಿದರು. ನಂತರ ಅತಿಥಿಗಳಾದ ಅಭಿಷೇಕ್ ಶೆಟ್ಟಿಯವರು ಬಂಟ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳ ಬೇಕೆಂದು ಹಾರೈಸಿದರು. ಶ್ಯಾಮಲ ಶೆಟ್ಟಿಯವರು ಧನ್ಯವಾದ ಸಲ್ಲಿಸುವುದರೊಂದಿಗೆ ಸಭಾ ಕಾರ್ಯಕ್ರಮ ಮುಗಿಸಿದರು.

ಶಾಂತಿದ್ಯೋತಕವಾದ ಪಾರಿವಾಳ ಹಾಗೂ ಬಲೂನುಗಳನ್ನು ಆಕಾಶದೆತ್ತರಕ್ಕೆ ಹಾರಿಬಿಡಲಾಯಿತು.

ನಂತರ ಸುಡುತ್ತಿರುವ ಬಿಸಿಲನ್ನು ಲೆಕ್ಕಿಸದೇ ಚಿಕ್ಕಮಕ್ಕಳಿಂದ ವಯಸ್ಕರವರೆಗೂ ಅವರಿಗೆಂದೇ ಮೀಸಲಿದ್ದ ಬೇರೆ ಬೇರೆ ಕ್ರೀಡೆಗಳಲ್ಲಿ ಅತೀ ಉತ್ಸಾಹದಿಂದ ಪಾಲ್ಗೊಂಡರು. ಸರ್ವ ವಿಜೇತರಿಗೆ ವಿಜಯ ವೇದಿಕೆಯಲ್ಲಿ ಪದಕ ಪ್ರಧಾನ ಮಾಡಲಾಯಿತು. ಆಡಳಿತ ಮಂಡಳಿ, ಕ್ರೀಡಾ ಸಮಿತಿ ಹಾಗೂ ಸರ್ವಸದಸ್ಯರ ಉಪಸ್ಥಿತಿ, ಸಹಕಾರ ಹಾಗೂ ಭಾಗವಹಿಸುವಿಕೆಯಿಂದ ಕಾರ್ಯಕ್ರಮವು ಶಿಸ್ತುಬದ್ಧವಾಗಿ ನಡೆದು ಸಂಪೂರ್ಣ ಯಶಸ್ವಿಯಾಯಿತು.




**Dr. Meera Krishnappa,** Principal of Dr. NSAM First Grade College was invited to deliver the keynote address on **'Changing Dynamics of Humanities & Social Sciences'** and present a paper at the 5th International Conference organized by ISAC (International Society for Applied Commerce) at Tashkent, Uzbekistan from 1st to 6th November 2016.

Her paper titled, **'The Paradigm Shift in Education'** which was co-authored by Ms. Shweta Krishnappa, Govt. Pleader, High Court of Karnataka, was presented with the 'Best Paper' award.

We congratulate Dr. Meera Krishnappa and Ms. Shweta Krishnappa for the honour.

### ಶ್ರೀ ಸಂದೇಶ

# ಧಾರ್ಮಿಕವಾಗಿ ದಾರಿ ತಪ್ಪುತ್ತಿದ್ದೇವೆಯೇ...?



ಡಾ| ಶ್ರೀ ಶ್ರೀ ಶ್ರೀ ವಿಶ್ವಸಂತೋಷ ಭಾರತಿ ಶ್ರೀ ಪಾದರು
ಬಾರ್ಕೂರು ಮಹಾಸಂಸ್ಥಾನ

ಭಾರತವು ಭಾವುಕತೆಯ ಮತ್ತು ನಂಬಿಕೆ ಆಧಾರದ ಮೇಲೆ ನಿಂತಿರುವ ದೇಶವೆಂಬುದು ವಿಶ್ವಕ್ಕೆ ಗೊತ್ತಿರುವ ವಿಷಯ. ದೇವರು, ತೀರ್ಥಕ್ಷೇತ್ರಗಳು, ಗುರುಪರಂಪರೆ, ಗ್ರಾಮ ದೇವತೆಯ ಆರಾಧನೆ ಹಾಗೆಯೇ ಬರಬರುತ್ತ ಹೋಮ ಹವನಗಳ ಜೊತೆಗೆ ಮಾಟ ಮಂತ್ರಗಳನ್ನು ನಂಬಿಕೊಂಡು ಬದುಕುವ ಭಾರತೀಯರ ಜೀವನ ಭಾವನಾತ್ಮಕವಾದುದ್ದು, ಹಾಗೆಂದ ಮಾತ್ರಕ್ಕೆ ನಂಬಿಕೆಗಳೆಲ್ಲವೂ ಮೂಢತನವಲ್ಲ. ಆರಾಧನೆಗೆ ನಂಬಿಕೆಯೆಂಬ ಬೆಸುಗೆಯು ಆತ್ಮಸ್ಥೈರ್ಯವನ್ನು ಬೆಸೆದು ಜೀವನವು ಆತ್ಮ ಮತ್ತು ಪರಮಾತ್ಮನ ಸಂಬಂಧದ ಬೆಸುಗೆಯಾಗುತ್ತದೆ. ಇವುಗಳಲ್ಲಿ ಬಹುಬಗೆಯ ದೇವರುಗಳು, ನಂಬಿಕೆಗಳು, ಆರಾಧನೆಗಳು ಹುಟ್ಟಿಕೊಂಡು ಪ್ರತಿಯೊಂದು ಸಮುದಾಯದ ಕುಲದಂಗಳದಲ್ಲಿ ಗೌರವಾನ್ವಿತ ಸ್ಥಾನವನ್ನು ಪಡೆದಿದೆ. ವಿಶೇಷವೆಂದರೆ ಈ ದೇಶದ ಬಹುತೇಕ ಸಮುದಾಯಗಳಲ್ಲಿ ತಮ್ಮದೇ ಆದ ಕುಲದೇವರು, ಕುಲಗುರುಗಳು, ಕುಲದೈವಗಳು, ಕುಲಸಂಪ್ರದಾಯಗಳು ಹುಟ್ಟಿಕೊಂಡು ಆಚರಣೆಯಾಗಿ ನಡೆದುಕೊಂಡು ಬಂದಿತ್ತು. ಕನ್ನಡಿಗರಲ್ಲಿ ಬಹುತೇಕ ಸಮುದಾಯದವರು ತಮ್ಮದೇ ಆದ ಕುಲದೇವರು, ಕುಲಸಂಪ್ರದಾಯಗಳು ತನ್ನದೇ ಧಾರ್ಮಿಕ ಸಂವಿಧಾನದಲ್ಲಿ ನೆಲೆ ಕಂಡುಕೊಂಡಿದ್ದಾರೆ.

ಆದರೆ ಬಂಟರು ಮಾತ್ರ ಇಂದಿಗೂ ಶಿವನನ್ನಾಗಲಿ, ಹರಿಯನ್ನಾಗಲಿ ಅಥವಾ ದುರ್ಗಾದೇವಿಯನ್ನಾಗಲಿ ತನ್ನ ಕುಲದ ದೇವರೆಂದು ಸ್ವೀಕರಿಸಿಕೊಂಡಿಲ್ಲ. ಬದಲಿಗೆ ತಾಯಿ ಮನೆಯ ನಂಟಿನೊಂದಿಗೆ ಕುಲದೈವಗಳನ್ನು ಮತ್ತು ನಾಗಗಳನ್ನು ಒಪ್ಪಿ ನಂಬಿಕೊಂಡು ಬರುತ್ತಿದ್ದಾರೆ. ಹಾಗಾದರೆ ನಂಬಿಕೊಂಡು ಬಂದಿರುವ ದೇವರುಗಳನ್ನು ಮನೆ ದೇವರು ಎಂದು ಸ್ವೀಕರಿಸಿದಂತಲ್ಲವೇ...? ಅದು ಇಷ್ಟದೇವರ ಆರಾಧನೆ ಎಂದು ಕರೆಯಿಸಿಕೊಳ್ಳುತ್ತದೆ. ಬಂಟ ಪರಂಪರೆಯಲ್ಲಿ ಪ್ರಾರಂಭದಿಂದಲೂ ಭೂತಾರಾಧನೆಯನ್ನು ಮಾಡುವ ನೆಲಗಟ್ಟಿನಲ್ಲಿ ತಾವು ನಂಬಿಕೊಂಡು ಬಂದಿರುವ ದೈವಗಳನ್ನು ಆರಾಧಿಸಿಕೊಂಡು ಬಂದಿರುವುದು ಈ ಸಮುದಾಯದ ವಿಭಿನ್ನತೆ. ತಾನು ಬದುಕಿ ಬಾಳುವ ಮನೆಯಲ್ಲಿ ದೈವದ ಮಂಚಗಳನ್ನಿಟ್ಟು, ಆಯುಧಗಳನ್ನಿಟ್ಟು, ತನ್ನ ದೈವ ತನ್ನೊಂದಿಗೆ ಇದೆ ಎಂಬ ಆಚರಣೆ ಆತ್ಮೀಯ ಆರಾಧನೆಗೆ ಸಾಕ್ಷಿ. ಇನ್ನೂ ಕೆಲವೆಡೆ ತನ್ನ ಒಕ್ಕಲುತನದ ಭೂಮಿಯಲ್ಲಿ ದೈವಗಳನ್ನು ಸ್ಥಾಪಿಸಿಕೊಂಡು ಆರಾಧಿಸುವುದು ಪ್ರತೀತಿಯಾಗಿ ಬಂದಿದೆ. ತನಗೆ ಸೇರಿದ ಜಮೀನಿನಲ್ಲಿ ತಾನು ನಂಬಿದ ನಾಗಗಳಿಗೂ ಸ್ಥಾನಗಳನ್ನು ಕಲ್ಪಿಸಿ ಆರಾಧಿಸುವ ಪದ್ಧತಿ, ಬಂಟರು ನಾಗವಂಶೀಯ ಕ್ಷತ್ರಿಯರು ಎಂಬುದಕ್ಕೆ ಹಿಡಿದ ಕನ್ನಡಿ ಆಗಿದೆ. ಬಂಟ ಸಮಾಜ ಭಾರ್ಗವ ಭೂಮಿಯಲ್ಲಿ ತನ್ನದೇ ಆದ ಸಂಪ್ರದಾಯ ಮತ್ತು ಭೂತಾರಾಧನೆ ಹಾಗೂ ನಾಗಾರಾಧನೆಯನ್ನು ಒಡಗೂಡಿಸಿಕೊಂಡು ಬಂದದ್ದು ಈಗ ಇತಿಹಾಸದ ಪುಟ ಸೇರುತ್ತಿರುವುದು ವಿಪರ್ಯಾಸ. ಆಳುವ ಅರಸರಾಗಿ, ಒಕ್ಕಲುತನದ ಒಡೆಯರಾಗಿ ಗುತ್ತು ಮತ್ತು ಬೀಡಿನ ಮನೆಯವರಾಗಿ ಬಂದವರು ಕೊನೆಗೆ ಒಡೆದು ಹೋಳಾಗಿ ಬಡವ, ಮಧ್ಯಮ, ಶ್ರೀಮಂತರಾಗಿ ಚದುರಿದವರೂ ಆರಾಧನೆ ಪದ್ಧತಿ ಬಿಡಲಿಲ್ಲ. ಆದರೆ ಇತ್ತೀಚಿನ ಹತ್ತಾರು ವರ್ಷಗಳಲ್ಲಿ ತನ್ನ ಮೂಲ ಸಂಪ್ರದಾಯಗಳನ್ನು, ಮರೆತು ಭೂತಗಳನ್ನು ತನಗೆ ಗೊತ್ತಿಲ್ಲದಂತೆ ದೂರ ಮಾಡುತ್ತ ತಾನೇ ಪೂಜೆಗಳನ್ನು ಮಾಡಿಕೊಂಡಿದ್ದ ನಾಗಗಳಿಂದ ತಾವೇ ದೂರವಾಗುತ್ತ ಇಡೀ ಮೂಲ ಸಂಪ್ರದಾಯಗಳನ್ನು ಗಾಳಿಗೆ ತೂರಿ, ಹಣದಾಹಿ ಪುರೋಹಿತಶಾಹಿಗಳ ಗುಲಾಮರಾಗಿ ಆಡಿಸಿದಂತೆ ಆಡುತ್ತ ಹಣ ಬಲ, ಭುಜಬಲವಿದ್ದರೂ, ಬುದ್ಧಿಬಲ ಇಲ್ಲದವರಂತೆ ದಾರಿ ತಪ್ಪುತ್ತಿರುವುದಕ್ಕೆ ಕಾರಣ ಹುಡುಕಬೇಕಿದೆ. ತನ್ನ ದೈವಗಳನ್ನು ನಂಬದೆ ಇರುವ ಪುರೋಹಿತರಿಂದ ದೈವಗಳ ಪೂಜೆ ಮಾಡಿಸುವುದು, ಅಭಿಷೇಕ ಮಾಡಿಸುವುದು ಶಾಸ್ತ್ರ ಬಾಹಿರವಾಗಿ ದೈವಗಳಿಗೆ ಬ್ರಹ್ಮ ಕಳಶ, ಕುಂಭಾಭಿಷೇಕ ಮಾಡಿಸುವುದು ಸ್ವತಃ ದೈವಗಳಿಗೇ ಮತ್ತು ಪರಬ್ರಹ್ಮ ನಾರಾಯಣನಿಗೆ 'ಇದೆಂಥಾ ಮೂಢರ ಸಮುದಾಯ' ಆಗುತ್ತಿದೆ ಎಂದು ಅಸಹ್ಯ ಎನಿಸುವಷ್ಟು ಈ ಸಮಾಜ ದಾರಿ ತಪ್ಪುತ್ತಿದೆ ಎಂಬ ಅಳುಕು ನಮ್ಮಲ್ಲಿ ಉಂಟಾಗುತ್ತಿದೆ.

ಇದಕ್ಕೆ ಕಾರಣ ಏನಿರಬೇಕೆಂದು ಊಹಿಸಿಕೊಳ್ಳುವಾಗ ಶಾಸ್ತ್ರ ಸಂಪನ್ನ, ಸತ್ಯವಂತ ಬ್ರಾಹ್ಮಣರನ್ನು ಒಲೈಸದೆ, ಹಣಪಿಶಾಚಿ ಭಯೋತ್ಪಾದಕ ಬ್ರಾಹ್ಮಣರಿಗೆ ಹೆಚ್ಚು ಉತ್ತೇಜನ ಕೊಡುತ್ತಾ ಸಮಾಜದ ಹಿರಿಯ ಧಾರ್ಮಿಕ ಮುಖಂಡರನ್ನು ಕಡೆಗಣಿಸಿ, ಧರ್ಮಜ್ಞಾನಿಗಳಿಗೆ ಬೆಲೆ ನೀಡದೆ ನಿರ್ಲಕ್ಷಿಸಿ ಸ್ವತಃ ತಾವು

ಅಧ್ಯಯನ ಮಾಡದೆ ಕೇವಲ ಧರ್ಮ ಭ್ರಷ್ಟರಂತೆ ಕಂಡಕಂಡವರ ಮಾತಿಗೆ ಬೆಲೆಕೊಟ್ಟು ಹಣದ ವೈಭವೀಕರಣದ ತೋರ್ಪಡಿಕೆಗಾಗಿ ಆರಾಧನೆಗಳನ್ನು ಉತ್ಸವಗಳಂತೆ ಆಚರಿಸುತ್ತಿರುವುದು ಧಾರ್ಮಿಕ ಪರಂಪರೆಯ ಹಾದಿಯಲ್ಲಿ ಗುರಿ ತಪ್ಪಿದೆ ಎಂದು ತಿಳಿಯುತ್ತಿದೆ. ಇದರಿಂದಾಗಿ ಮಧ್ಯಮ ವರ್ಗದವರಿಗೆ ದೇವರ ಆರಾಧನೆ ಮತ್ತು ಯಕ್ಷಗಾನ ಸೇವೆಗಳು ನುಂಗಲಾರದ ತುತ್ತಾಗಿದ್ದರೆ ಬಡವರಿಗೆ ಇದು ಗಗನಕುಸುಮವಾಗಿದೆ. ಧಾರ್ಮಿಕ ಆಚರಣೆಯಲ್ಲಿ ಬರುವ ಬಹುತೇಕ ರೀತಿ ನೀತಿಗಳು ಶೇಕಡಾ 95 ಮಂದಿಗೆ ಗೊತ್ತೇ ಇಲ್ಲ. ಉದಾಹರಣೆಗೆ ಮದುವೆಗಳಲ್ಲಿ ಮದರಂಗಿ ಇಡುವುದೇಕೆ?... ಪದ್ಧತಿ ಹೇಗೆ... ಬಂಟರಲ್ಲಿ ಮದುವೆ ಪದ್ಧತಿ ಹೇಗೆ? ...ಏಕೆ...ಬಯಕೆ ಹಾಕುವ ಪದ್ಧತಿ! ತಾಯಿ ಮನೆಯಲ್ಲಿ ಪ್ರಥಮವಾಗಿ ಹಾಕಬೇಕು... ಮತ್ತು ಏಕೆ... ಬಂಟರ ಮನೆಯಲ್ಲಿ ತುಳಸಿಯ ಪಾತ್ರವೇನು?....

ಮಗಳನ್ನು ಧಾರೆಯೆರೆಯದ ಏಕೈಕ ಸಮಾಜ ಬಂಟರಾಗಿದ್ದವರು, ಈಗ ಅರೆಬರೆ ಜ್ಞಾನದ ಪುರೋಹಿತರ ಗುಲಾಮರಾಗಿ ಧಾರೆ ಎರೆಯುತ್ತಿರುವುದು ಏಕೆ?... ಹೇಗೆ... ಭತ್ತದ ಕದಿರುಗಳನ್ನು ತುಳಸಿಕಟ್ಟೆಯ ಬದಿ ಇಡುವುದೇಕೆ? ಹಬ್ಬ ಹರಿದಿನಗಳಲ್ಲಿ ಭಕ್ತಿ ಪೂಜೆಗಳ ನಡುವೆ ದೀಪಾವಳಿ ಹಬ್ಬದಲ್ಲಿ ಕೋಳಿ ಪದಾರ್ಥ ಹಾಗೂ ಉದ್ದಿನದೋಸೆಯ ಪದ್ಧತಿ ಏಕಿತ್ತು? ಇದು ಎಷ್ಟು ಜನರಿಗೆ ಗೊತ್ತಿತ್ತು? ಸತ್ಯನಾರಾಯಣ ಪೂಜೆ ಮಾಡಿಸುವ ಪದ್ಧತಿ ಹೇಗೆ?... ಏಕೆ... ದೈವದ ಪೂಜೆಯಲ್ಲಿ ಆಚರಿಸುವ ರೀತಿ ನೀತಿಗಳು ಏನು? ನಂಬದವರು ಪೂಜಿಸಬೇಕೋ? ಅಥವಾ ನಂಬದವರು ಪೂಜಿಸಿ ದೈವಗಳ ಮೇಲೆ ಭಕ್ತಿಭಾವ ಇಲ್ಲದವರು ನೀಡಿದ ಪ್ರಸಾದವನ್ನು ದೂರದಿಂದ ಬಗ್ಗಿ ಸ್ವೀಕರಿಸುವ ಹೀನಸ್ಥಿತಿ ಬೇಕೋ?

ಎಂಬುದನ್ನು ವಿಚಾರ ಮಂಥಿಸಿ ಮುಂದೆ ಹೆಜ್ಜೆ ಇಡಬೇಕಾಗಿದೆ. ಮುಂದಿನ ಪೀಳಿಗೆಯ ಉಪಗ್ರಹ (Satellite) ಪ್ರಪಂಚದ ಮಕ್ಕಳಲ್ಲಿ ದೈವ ದರ್ಶನ, ನಾಗದರ್ಶನಗಳ ಬಗ್ಗೆ ನಂಬಿಕೆ ಮೂಡಿಸುತ್ತೀರೋ ಅಥವಾ ಆ ಮಕ್ಕಳನ್ನು ವ್ಯಾಪಾರಿ ಭಟ್ಟರ "ಭಂಟ" (ಸೇವಕ)ರನ್ನಾಗಿ ಮಾಡುತ್ತೀರಾ? ಎಂಬ ಪ್ರಶ್ನೆ ನಿಮ್ಮ ಜೇಬಿನೊಳಗಿರಲಿ. ನಾಗರ ಕಲ್ಲುಗಳನ್ನ ಮುಟ್ಟಬಾರದೇಕೆ? ಘಟ್ಟದಲ್ಲಿ ಎಲ್ಲಾ ಹೆಣ್ಣುಮಕ್ಕಳು ಆರಾಧಿಸುವ ನಾಗನಿಗೆ, ಕರಾವಳಿಯಲ್ಲಿ ಮಾತ್ರ ಪುರೋಹಿತ ಪ್ರಿಯವಾದದ್ದು ಹೇಗೆ? ನಾಗ ಮೈಮೇಲೆ ಬರುವುದಕ್ಕೆ "ಬ್ರಾಹ್ಮಣ", "ನೃತ್ಯಗಾರ"ರನ್ನೇ ಆಯ್ಕೆ ಮಾಡಿಕೊಂಡಿರುವುದು ಏಕೆ...?

ಹಾಗಾದರೆ ನಾಗನ ವಿಧಗಳೆಷ್ಟು? ಜಾತಿ ಎಷ್ಟು? ಪದ್ಧತಿ ಹೇಗೆ? ನಾಗಮಂಡಲ ಎಂದರೇನು? ನಾಗಮಂಡಲವನ್ನು ಒಂದು ಕುಟುಂಬದವರು ಆರಾಧಿಸಬಾರದು ಏಕೆ? ಇದು ಹುಟ್ಟಿದ್ದು ಹೇಗೆ? ಏನನ್ನೂ ತಿಳಿಯದೆ ಯಾವುದೋ ಅವಿವೇಕಿ ಜ್ಯೋತಿಷ್ಯರುಗಳ ಪ್ರಭಾವಕ್ಕೆ ಸಿಲುಕಿ ಅಷ್ಟಮಂಗಲ ಹಾಕಿಸಿಕೊಂಡು, ನಷ್ಟ ಮಂಡಲ ಮಾಡಿಸಿಕೊಳ್ಳುತ್ತಿರುವುದು ದೌರ್ಭಾಗ್ಯವೋ ಸೌಭಾಗ್ಯವೋ ತಿಳಿಯುತ್ತಿಲ್ಲ. ಕೋಟಿಗಟ್ಟಲೇ ಹಣ ಖರ್ಚು ಈ ವೈಭವೀಕರಣಕ್ಕೆ ಮಾಡಿ, ಯಾವುದೋ ಭಯೋತ್ಪಾದಕ ಮೋಸಗಾರರನ್ನು ಉದ್ಧಾರ ಮಾಡಿಕೊಡುವುದಕ್ಕಿಂತ ನಿಮ್ಮ ಸಂತಾನದಲ್ಲೇ ಬಡವರಾಗಿ ಉಳಿದಿರುವ ನಿಮ್ಮ ಸಂಬಂಧಿಕರಿಗೆ ಈ ಕೋಟಿ ಹಣವನ್ನು ಹಂಚಿ ಆ ನಾಗನಿಗೆ ನಮಸ್ಕರಿಸಿದರೆ, ನಾಗದೇವನು ಸಂತೃಪ್ತನಾಗಿ ಇನ್ನಷ್ಟು ಐಶ್ವರ್ಯವನ್ನು ವೃದ್ಧಿಸುತ್ತಾನೆ. ಇನ್ನೂ ಹಲವು ದಾರಿಯಲ್ಲಿ ಹಲವು ಕಡೆ ಎಡವುತ್ತಿರುವುದು ಎಲ್ಲಿ... ಹೇಗೆ... ಎಂದು ಹಲವು ಕವಲುಗಳಲ್ಲಿ ಚಿಂತನೆಗಳನ್ನು ಮಾಡಿ...

ಭಗವಂತನ ಸ್ಮರಣೆಯೊಂದಿಗೆ.


## ತುಳು ಕೂಟದ ನೂತನ ಅಧ್ಯಕ್ಷರಾಗಿ ಶ್ರೀ ಕೆ. ಜಯರಾಮ ಸೂಡ



ಇತ್ತೀಚೆಗೆ ನಡೆದ ಬೆಂಗಳೂರು ತುಳು ಕೂಟದ ಸರ್ವ ಸದಸ್ಯರ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಗೌರವ ಕಾರ್ಯದರ್ಶಿಗಳಾಗಿ ಶ್ರೀ ಕುರಿಯ ಸುಂದರ ರೈ, ಜಂಟಿ ಕಾರ್ಯದರ್ಶಿಗಳಾಗಿ ಉಪ್ಪಳ ರಾಜಾರಾಮ ಶೆಟ್ಟಿ, ಸಂಘಟನಾ ಕಾರ್ಯದರ್ಶಿಯಾಗಿ ಶ್ರೀ ಕೆ. ಅಜಿತ್ ಹೆಗ್ಡೆ, ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ಶ್ರೀ ಎನ್. ಸತ್ಯಾನಂದ ಮೇಲಾಂಟ ಹಾಗೂ ಶ್ರೀ ನಾರಾಯಣ ಭಂಡಾರಿ, ಶ್ರೀ ವೇಣುಗೋಪಾಲ ಶೆಟ್ಟಿ, ಶ್ರೀ ಪ್ರೇಮ್‌ಪ್ರಸಾದ್ ಶೆಟ್ಟಿ, ಶ್ರೀ ರವೀಂದ್ರನಾಥ್ ಮಾರ್ಲ ಆಯ್ಕೆಯಾಗಿರುತ್ತಾರೆ. ನಮ್ಮ ಸಂಘದ ಸದಸ್ಯರಾದ ಇವರುಗಳಿಗೆ ಸಂಘದ ಪರವಾಗಿ ನೂತನ ಪದಾಧಿಕಾರಿಗಳಿಗೆ ಹಾರ್ದಿಕ ಅಭಿನಂದನೆಗಳು

# ಸರಳ ಮದುವೆ
## ವಿವಾಹ ವೇದಿಕೆಯ ಸಹಾಯ–ಸಹಕಾರ



ಎ. ಗಿರೀಶ್ ರೈ

ಬಂಟರ ಸಂಘ ಪ್ರಾರಂಭಿಸಿರುವ ವಿವಾಹ ವೇದಿಕೆ ಒಂದು ಉತ್ತಮ ಸಮಾಜಮುಖಿ ಕಾರ್ಯಕ್ರಮ. ನಮ್ಮ ಕೆಲಸಕಾರ್ಯ, ಚಿಂತನೆ ಸಂಘದ ಗೌರವ ಘನತೆ ಹೆಚ್ಚಿಸುವಂತೆ ಇರಬೇಕು. ಅದ್ದೂರಿ ವಿವಾಹಗಳು, ವರದಕ್ಷಿಣೆ ಮುಂತಾದವುಗಳು ಈಗ ಕಡಿಮೆಯಾಗುತ್ತಿದ್ದರೂ ಸಮಾಜದ ಮುಖ್ಯವಾಗಿ ಹೆಣ್ಣುಮಕ್ಕಳ ವಿವಾಹ ಸಮಸ್ಯೆಯಾಗಿ ರೂಪುಗೊಂಡಿದೆ. ಇದನ್ನು ಮನಗಂಡ ಸಂಘ ಈ ಸಮಸ್ಯೆಯನ್ನು ಪರಿಹರಿಸಲು ವಿವಾಹ ವೇದಿಕೆಯನ್ನು ಸುಮಾರು ಎರಡು ದಶಕದ ಹಿಂದೆ ಪ್ರಾರಂಭಿಸಿದ್ದು ಈ ಘಟಕದ ನಿರಂತರ ಪರಿಶ್ರಮದಿಂದ ಪ್ರಸಕ್ತ ಸುಮಾರು 1500 ವಿವಾಹಯೋಗ್ಯ ಹುಡುಗ–ಹುಡುಗಿಯರ ಸಮಗ್ರ ವಿವರ (Profile) ಲಭ್ಯವಿದೆ. ಇದರಲ್ಲಿ ಹುಡುಗ–ಹುಡುಗಿಯರ ವಯಸ್ಸು, ವಿದ್ಯಾರ್ಹತೆ ಕುಟುಂಬದ ಮಾಹಿತಿ ಇತ್ಯಾದಿ ಅಗತ್ಯ ಹಾಗೂ ನಿಖರ ಮಾಹಿತಿಗಳನ್ನು ಕ್ರೋಢೀಕರಿಸಿ ತಯಾರಿಸಲಾಗಿದೆ. ಈ ಮಾಹಿತಿಯನ್ನು ಮಾತಾ–ಪಿತೃಗಳಿಗೆ ಅವರ ಕೋರಿಕೆಯಂತೆ ಒದಗಿಸಲಾಗುತ್ತದೆ. ಇದಲ್ಲದೆ ಪ್ರತಿ ವರ್ಷ ಒಂದೆರಡು ವಧೂ–ವರರ ಸಮಾವೇಶಗಳನ್ನು ಏರ್ಪಡಿಸಿ, ಹುಡುಗ–ಹುಡುಗಿ ಮತ್ತು ಸಂಬಂಧಿಕರು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶ ಕಲ್ಪಿಸಿಕೊಡಲಾಗಿದೆ. ಇಂತಹ ಹಲವು ಅರ್ಥಪೂರ್ಣ ಸಮಾವೇಶಗಳು ನೇರವೇರಿದ್ದು ಹಲವಾರು ವಿವಾಹಗಳಿಗೆ ವೇದಿಕೆಯಾಗಿದೆ. ಮುಂದಿನ ಸಮಾವೇಶವನ್ನು ಇದೇ ಡಿಸೆಂಬರ್ 18, 2016 ರಂದು ಏರ್ಪಡಿಸಲಾಗಿದೆ.

### ಮಹತ್ವಪೂರ್ಣ ಸಮಾರಂಭ:

ಮದುವೆ ಮಾನವ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣ ಸಮಾರಂಭ. ಅನೇಕ ವ್ಯವಸ್ಥಿತ ಮದುವೆ, (ಅರೇಂಜ್‌ಡ್ ಮದುವೆ)ಯಲ್ಲಿ ಗಂಡು–ಹೆಣ್ಣು ಅವರ ಪ್ರಥಮ ಭೇಟಿ ಕಲ್ಯಾಣ ಮಂಟಪದಲ್ಲಿ. ಮದುವೆಯ ಸಮಯದಲ್ಲಿ ಹುಡುಗ–ಹುಡುಗಿಯ ಮನಸ್ಸಿನಲ್ಲಿ ಹಲವು ಪ್ರಶ್ನೆಗಳು ಉದ್ಭವಿಸುವುದು ಸಹಜ. ಹುಡುಗ ಒಳ್ಳೆಯವನಂತೆ ತೋರುತ್ತಾನೆ ಇವರ ತಂದೆ ತಾಯಿ ಸಂಬಂಧಿಕರು ಹೇಗಿದ್ದಾರೋ? ಎಂಬ ಸಂಶಯ ಮೂಡಬಹುದು ಮದುಮಗಳು ಒಪ್ಪುವವಳಾಗಿದ್ದಾಳೆ ಇವಳು ನನ್ನ ಅಮ್ಮ ಅಪ್ಪ ಅಣ್ಣ ಅಕ್ಕಂದಿರೊಂದಿಗೆ ಹೊಂದಿಕೊಂಡು ಹೋಗುತ್ತಾಳೋ, ಇದ್ದುದ್ದರಲ್ಲಿ ಅನುಸರಿಸಿಕೊಂಡು ಹೋಗುತ್ತಾಳೋ? ಎಂದು ಗ್ರಹಿಸಬಹುದು. ಇಂತಹ ಅನೇಕ ಯೋಚನೆಗಳು ಇಬ್ಬರನ್ನೂ ಕಾಡಬಹುದು. ಮದುವೆಯ ನಂತರದ ಜೀವನದಲ್ಲಿ ಕೆಲವು ಅನಿರೀಕ್ಷಿತ ಘಟನೆಗಳು ನಡೆಯಬಹುದು. ನಾನೆಂದೂ ಈತನಕ ಕಾಣದ ಪರಿಸರಕ್ಕೆ ಹೋಗಿ ಹೊಸ ಮನೆಯನ್ನು ಪ್ರವೇಶಿಸುತ್ತಿದ್ದೇನೆಂದು ಮದುಮಗಳು ಕನಸು ಕಾಣುತ್ತಿರಬಹುದು. ಅಲ್ಲಿಯೇ ಶಾಶ್ವತವಾಗಿ ಇರುತ್ತೇನೆ ನನ್ನ ಸುಖ ಸಂತೋಷ ದುಃಖ ಎಲ್ಲವೂ ಅಲ್ಲಿಯ ಸಂಬಧಿಕರೊಂದಿಗೆ ಹಾಸು ಹೊಕ್ಕಾಗಲಿದೆ. ಆಶ್ಚರ್ಯವೇನೆಂದರೆ ಈವರೆಗೆ ಅವರ ಪರಿಚಯವೇ ನನಗಿಲ್ಲ. ಅವರ ರೀತಿ ನೀತಿ ಎಲ್ಲವೂ ವಿಭಿನ್ನ, ಎಲ್ಲವನ್ನೂ ಸಹಜವಾಗಿಯೇ ಸ್ವೀಕರಿಸಬೇಕು. ಜೀವನದ ಪರಿಯೇ ಹೀಗೆ. ಅಪರಿಚಿತರು ತೀರಾ ಹತ್ತಿರದ ಸಂಬಂಧಿಗಳಾಗುತ್ತಾರೆ. ಅವರಲ್ಲಿ ಒಂದಾಗಿ ಸಾರ್ಥಕತೆಯನ್ನು ಅವಳು ಕಂಡುಕೊಳ್ಳುತ್ತಾಳೆ. ವಿವಾಹದ ನಂತರ ಗಂಡನ ಮನೆಯಲ್ಲಿ ಹೇಗಿರಬೇಕು? ಅತ್ತೆ ಮಾವ ಮತ್ತಿತರ ಬಂಧುಗಳು ಎಲ್ಲರೊಂದಿಗೆ ಹೊಂದಿಕೊಂಡು ಜೀವನ ನಡೆಸಲು ಸಲಹೆಗಳನ್ನು ಹೆಣ್ಣಿಗೆ ತಂದೆ ತಾಯಿ ಬಂಧು–ಬಳಗದವರು, ಮನೆಯವರು ಮನದಟ್ಟು ಮಾಡಬೇಕು. 'ಅತ್ತೆಯ ಮನೆಯಲ್ಲಿ ಮುತ್ತಾಗಿ ಇರಬೇಕು. ಹೊತ್ತಾಗಿ ನೀಡಿದರೂ ಉಣಬೇಕು ಮಗಳೇ' ಎಂದು ಹರಸಿ ಗಂಡನ ಮನೆಗೆ ಬೀಳ್ಕೊಡುವ ಸಂಪ್ರದಾಯ ನಮ್ಮದು.

### ಪುರಾಣಗಳಲ್ಲಿ ಕೆಲವು ಸನ್ನಿವೇಶಗಳು

ಮದುವೆಯ ಕುರಿತ ಕೆಲವು ಸನ್ನಿವೇಶಗಳು ಪುರಾಣಗಳಲ್ಲಿ ಉಲ್ಲೇಖಗೊಂಡಿದೆ. ಮಗುವನ್ನು ತಾಯಿ ಮೇನಕೆ ಕಾನನದಲ್ಲಿ ಬಿಟ್ಟು ಹೊರಟು ಹೋಗುತ್ತಾಳೆ. ಪಕ್ಷಿಗಳು ಪುಟ್ಟ ಮಗುವನ್ನು ರಕ್ಷಿಸಿ ಬೆಳೆಸುತ್ತವೆ. ಈ ಸನ್ನಿವೇಶದಲ್ಲಿ ಮಹರ್ಷಿ ಕಣ್ವರು ಮಗುವನ್ನು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋಗಿ ಸಾಕುತ್ತಾರೆ. ಶಕುಂತಲೆ ಎಂದು ನಾಮಕರಣ ಮಾಡುತ್ತಾರೆ. ಕಾಲಕ್ರಮೇಣ ಶಕುಂತಲೆ ದೊಡ್ಡವಳಾಗಿ ಅತ್ಯಂತ ಸುಂದರಿಯಾಗಿ ರೂಪುಗೊಳ್ಳುತ್ತಾಳೆ. ಇಂತಹ ಸನ್ನಿವೇಶದಲ್ಲಿ ಕಣ್ವ ಮಹರ್ಷಿಗಳು ಪ್ರಯಾಣ ಹೋಗಿರುವ ಸಮಯದಲ್ಲಿ

ದುಷ್ಯಂತ ಆ ದಾರಿಯಲ್ಲಿ ಪ್ರಯಾಣಿಸುತ್ತಿರುವಾಗ ಸಖಿ ಪ್ರಿಯಂವಧೆಯೊಂದಿಗಿದ್ದ ಶಕುಂತಲೆಯನ್ನು ಕಂಡು ಅವಳ ಸೌಂದರ್ಯಕ್ಕೆ ಮಾರುಹೋಗಿ, ತನ್ನನ್ನು ಮದುವೆಯಾಗ ಬೇಕೆಂದು ಪ್ರಸ್ತಾವನೆ ಇಡುತ್ತಾನೆ. ಗುರು–ಹಿರಿಯರು ಯಾರೂ ಇಲ್ಲದಿರುವ ಸನ್ನಿವೇಶದಲ್ಲಿ ಇಬ್ಬರೂ ಒಪ್ಪಿದರೆ ಗಂಧರ್ವ ವಿಧಿಯಂತೆ ವಿವಾಹವಾಗಬಹುದೆಂದು ದುಷ್ಯಂತ ಶಕುಂತಲೆಯನ್ನು ಒಪ್ಪಿಸುತ್ತಾನೆ. ಮದುವೆ ನಂತರ ಕೆಲವು ದಿನಗಳಲ್ಲಿ ರಾಜ್ಯಕ್ಕೆ ಹಿಂತಿರುಗುತ್ತಾನೆ. ನಂತರ ಶಕುಂತಲೆ ಅನುಭವಿಸಿದ ಕಷ್ಟ ಕಾರ್ಪಣ್ಯಗಳು ಹಲವು.

ಗಂಗಾ ನದಿ ತೀರದ, ನಿಷಧನ ಮಗಳಾದ ಮತ್ಸ್ಯಗಂಧಿ ಅತ್ಯಂತ ಸುಂದರಿಯಾಗಿದ್ದಳು. ರಾಜ್ಯದ ಚಕ್ರವರ್ತಿ ಆ ದಾರಿಯಲ್ಲಿ ಪ್ರಯಾಣಿಸುತ್ತಿರುವಾಗ ಮತ್ಸ್ಯಗಂಧಿಯನ್ನು ನೋಡಿ ಅವಳ ಸೌಂದರ್ಯಕ್ಕೆ ಮಾರುಹೋಗಿ, ತಾನು ಮತ್ಸ್ಯಗಂಧಿಯನ್ನು ವಿವಾಹವಾಗುತ್ತೇನೆಂದು ತಿಳಿಸಿ ಅವಳು ಚಕ್ರವರ್ತಿಯೊಂದಿಗೆ ಅರಮನೆಗೆ ಹೊರಡಬೇಕೆಂದು ಅಜ್ಞಾಪಿಸುತ್ತಾನೆ. ಮುಗ್ಧ ಮತ್ಸ್ಯಗಂಧಿ "ನನ್ನ ಮದುವೆಯ ವಿಚಾರ ನಾನು ಏನನ್ನೂ ನಿರ್ಣಯಿಸಲು ಸಾಧ್ಯವಿಲ್ಲ, ನನ್ನ ತಂದೆ ಮಾತ್ರ ಈ ನಿರ್ಣಯ ಕೈಗೊಳ್ಳಬೇಕು ಎಂದು ತಿಳಿಸಿ, ತಂದೆ ಹಿಂತಿರುಗಿ ಬರುವ ತನಕ ಮಹಾರಾಜರನ್ನು ಕಾಯಿಸುತ್ತಾಳೆ.

ತಾಯಿ ತಂದೆ ಇಲ್ಲದ ಮಗು ಶಕುಂತಲೆಯನ್ನು ತಂದೆಯ ಸ್ಥಾನದಲ್ಲಿ ನಿಂತು ಬೆಳೆಸಿದ ಮಹರ್ಷಿ ಕಣ್ವರು ಹಿಂತಿರುಗಿ ಬರುವ ತನಕ ಕಾಯದೇ ಶಕುಂತಲೆ ತನ್ನ ಬಾಲಿಷ ಪ್ರೀತಿ 'Infatuation' ವರ್ತನೆಯಿಂದ ಸಾಂಧರ್ಭಿಕ ಜಾಣ್ಮೆ ತೋರದೆ ಅವಸರ ಪಟ್ಟು ಮುಂದಿನ ಜೀವನದಲ್ಲಿ ಕಷ್ಟ ಅನುಭವಿಸುತ್ತಾಳೆ. ಆದರೆ ಮತ್ಸ್ಯಗಂಧಿ ತೋರಿದ ಸಮಯ ಪ್ರಜ್ಞೆ ಮತ್ತು ವಿವೇಕದಿಂದ ಅವಳ ಮುಂದಿನ ಬಾಳು ಹಸನಾಗುತ್ತದೆ. ಇಂದಿನ ಯುವಕ ಯುವತಿಯರು ಪುರಾಣಗಳ ಇಂತಹ ಸನ್ನಿವೇಶಗಳನ್ನು ಅರಿತುಕೊಂಡು ಆತುರ ಪಡದೆ ವಿವೇಕದಿಂದ ವರ್ತಿಸಿದರೆ ಮದುವೆ ಅತ್ಯಂತ ಸಂತೋಷದಾಯಕ.

## ಮದುಮಗಳ ಪಾದಯಾತ್ರೆ:

ಮದುವೆಗೆ ತಯಾರಾಗಿ ನಿಂತಿರುವ ಬೆಂಗಳೂರಿನ ಪ್ರೇಮ ಎನ್ನುವ ಹೆಸರಿನ ವಧು ತನ್ನ ಭಾವೀ ಪತಿಯನ್ನು ಮದುವೆಯಾಗಲು ದಿನಾಂಕ 13.9.2016 ರಂದು ಕರ್ನಾಟಕದ ಅತ್ತಿಬೆಲೆಯಿಂದ ಹೊರಟು ಚಿನ್ನಾಭಾರಣ ತೊಟ್ಟು, ರೇಷ್ಮೆ ಸೀರೆ ಉಟ್ಟು ತಮಿಳುನಾಡಿನ ಹೊಸೂರಿಗೆ ಕಾಲ್ನಡಿಗೆಯಿಂದಲೇ ತೆರಳಿ, ಅಲ್ಲಿಂದ ತಮಿಳುನಾಡಿನ ಬಸ್ಸಿನಲ್ಲಿ ವಾಣಿಯಂಬಾಡಿಗೆ ತೆರಳಿ ಮರುದಿನ ಬುಧವಾರ ವಿವಾಹವಾಗುತ್ತಾಳೆ. ಕರ್ನಾಟಕ ತಮಿಳುನಾಡಿನ ನಡುವೆ ಈ ಅವಧಿಯಲ್ಲಿ 'ಕಾವೇರಿ' ವಿಷಯದಿಂದ ಸಂಚಾರ ವ್ಯವಸ್ಥೆ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು. ಮೊದಲೇ ಕಷ್ಟ ಪಟ್ಟು ಹಲವಾರು ಮೈಲಿಗಳ ದೂರ ನಡೆದೇ ಹೋಗಿ ಮದುವೆಯಾಗಿ ಸಂಭ್ರಮ ಆಚರಿಸಿದ್ದಾಳೆ. ತನ್ನ ಮದುವೆಯ ದಿಬ್ಬಣವನ್ನು ತಾನೇ ನಾಯಕಿಯಾಗಿ ಮುನ್ನಡೆಸಿದ್ದಾಳೆ. ಮದುವೆಗೆ ಪಣತೊಟ್ಟ ಪ್ರೇಮ ಯಾವುದೇ ಸಮಸ್ಯೆಯಿಂದ ವಿಚಲಿತಳಾಗದೆ ಹಟ ಸಾಧಿಸಿದ್ದಾಳೆ, ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದಾಳೆ.

## ನಾಯಿಗಾಗಿ ಮುರಿದ ಮದುವೆ :

ತನ್ನನ್ನು ಮದುವೆಯಾಗಲು ನಿಶ್ಚಯಿಸಿದ್ದ ಯುವಕ ತನ್ನ ನಾಯಿಯನ್ನು ಇಷ್ಟ ಪಟ್ಟಿಲ್ಲವೆಂಬ ಕ್ಷುಲ್ಲಕ ಕಾರಣಕ್ಕೆ ಬೆಂಗಳೂರಿನ ಹುಡುಗಿ ಕರೀಷ್ಮ ವಾಲಿಯ ನಿಶ್ಚಿತವಾಗಿದ್ದ ಮದುವೆಯನ್ನು ಮುರಿದಿದ್ದಾಳೆ. ಇದೊಂದು ದಾಖಲೆಯೇ ಆಗಬಹುದು.

ಮನುಷ್ಯರು ಸಂಗೀತದಂತೆ ನಿಯಮ ಬದ್ಧವಾಗಿ ಬಾಳಬೇಕು ಎಂದು ಆಂಗ್ಲ ಕವಿ W.B. YEATS ಹೇಳಿರುತ್ತಾನೆ. ಮದುವೆಯ ನಂತರದ ಜೀವನದಲ್ಲಿ ಕೆಲವು unpredictable ಘಟನೆಗಳು ಸಂಭವಿಸಬಹುದು. ಮದುವೆಯ ಕುರಿತು ಮಧುರ ಸ್ವಪ್ನಗಳನ್ನೇ ಕಂಡಿರುವ ಕನಸು ಕಂಗಳ ಹುಡುಗಿಗೆ ಮುಂದೆ ಯಾವ ತರದ ಸಮಸ್ಯೆಗಳನ್ನು ಎದುರಿಸಬೇಕಾಗಬಹುದೆಂಬ ಕಲ್ಪನೆಯೇ ಇರಲಾರದು. ಇಲ್ಲದ ಸಲ್ಲದ ನಿರೀಕ್ಷೆಗಳಿಂದ ಮನನೊಂದುಕೊಳ್ಳಬಹುದು ನಮ್ಮ ಸಮಾಜದಲ್ಲಿ ಮದುವೆಯ ನಂತರ ದಾಂಪತ್ಯ ನಿರ್ವಹಣೆ ಮೊದಲಾದ ಮುಖ್ಯ ವಿಷಯಗಳನ್ನು ಯುವಕ ಯುವತಿಯರಿಗೆ ವಿವರಿಸಿ ಹೇಳುವ ಅಭ್ಯಾಸ – ಪರಿಸ್ಥಿತಿ ಇರುವುದಿಲ್ಲ. ಸಂಸಾರದಲ್ಲಿ ಸುಖ–ಶಾಂತಿ ಆನಂದಮಯ ವಾತಾರವಣವಿರಲು, ಗಂಡ–ಹೆಂಡತಿಯರು ಅನ್ಯೋನ್ಯವಾಗಿ ಅರಿತುಕೊಂಡು ವೃಥಾ ಕಲಹಗಳು ತಲೆದೋರದಂತೆ ಮುಂಜಾಗ್ರತರಾಗಿರಬೇಕೆಂದು ಜಾನ್ ಗ್ರೇ ಬರೆದಿರುವ 'MEN are from Mars WOMEN are from VENUS' ಪುಸ್ತಕದಲ್ಲಿ ವಿವರಿಸಿದ್ದಾನೆ. ಪುಸ್ತಕದಲ್ಲಿ ಕುಟುಂಬದಲ್ಲಿ ಸಮಸ್ಯೆ ಎದುರಾದಾಗ, ಸಂಯಮಚಿತ್ತರಾಗಿ ಪರಸ್ಪರ ಮಾತನಾಡಿ ತಮ್ಮಲ್ಲಿ ಕೌಟುಂಬಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕೆಂದು ಹಲವಾರು ಉದಾಹರಣೆಗಳು ಇಪ್ಪತ್ತೈದು ಸಾವಿರಕ್ಕಿಂತಲೂ ಅಧಿಕ ಗಂಡ–ಹೆಂಡತಿಯರನ್ನು ಸಂದರ್ಶನ ಮಾಡಿ ಕೊನೆಯಲ್ಲಿ ವಿಚ್ಛೇದನಗಳನ್ನು ತಡೆಯಲು ದಾರಿ ತೋರಿಸುತ್ತಾನೆ.

## ಬೆಂಗಳೂರು ಬಂಟರ ಸಂಘದ ವತಿಯಿಂದ ಬಾಳೆಹೊನ್ನೂರು ಬಂಟರ ಸಂಘದ ವತಿಯಿಂದ

# ವಿದ್ಯಾರ್ಥಿ ವೇತನ ಹಾಗೂ ಹೊಲಿಗೆ ಯಂತ್ರ ವಿತರಣೆ





ವಿದ್ಯಾಗಣಪತಿ ಸಮುದಾಯ ಭವನದಲ್ಲಿ ಬಂಟರ ಯಾನೆ ನಾಡವರ ಸಂಘ, ಬಾಳೆಹೊನ್ನೂರು ಹಮ್ಮಿಕೊಂಡಿದ್ದ ಸತ್ಯನಾರಾಯಣ ಪೂಜೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಉಚಿತ ಹೊಲಿಗೆ ಯಂತ್ರ ವಿತರಣಾ ಕಾರ್ಯಕ್ರಮವು ದಿನಾಂಕ: 26-11-2016ರಂದು ನಡೆಯಿತು. ಬೆಂಗಳೂರು ಬಂಟರ ಸಂಘದ ವತಿಯಿಂದ ಹೊಲಿಗೆ ಯಂತ್ರಗಳನ್ನು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು. ಕಾರ್ಯಕ್ರಮವನ್ನು ಶ್ರೀಮತಿ ಅಮ್ಮಣ್ಣಿ ಶೆಟ್ಟಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಕೆ.ಪಿ. ಶೇಖರ್ ಶೆಟ್ಟಿ ಉದ್ಘಾಟಿಸಿದರು. ಬಾಳೆಹೊನ್ನೂರು ಬಂಟರ ಸಂಘದ ಅಧ್ಯಕ್ಷರಾದ ಡಾ. ಸುನೀಲ್‌ಕುಮಾರ್ ರೈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಬಿ. ಚಂದ್ರಹಾಸ ರೈ, ಸಂಘದ ಕಾರ್ಯದರ್ಶಿ ಶ್ರೀ ಪಿ. ಸಂತೋಷ್ ಶೆಟ್ಟಿ, ಸಂಘದ ಖಜಾಂಚಿ ಶ್ರೀ ಬಿ. ಆನಂದರಾಮ ಶೆಟ್ಟಿ, ಸಮಾಜ ಸೇವಾ ವಿಭಾಗದ ಅಧ್ಯಕ್ಷರಾದ ಶ್ರೀ ರಾಧಾಕೃಷ್ಣ ಶೆಟ್ಟಿ, ವಿದ್ಯಾರ್ಥಿ ವೇತನ ಸಮಿತಿಯ ಅಧ್ಯಕ್ಷರಾದ ಶ್ರೀ ರಮಿತ್ ಬಿ. ಶೆಟ್ಟಿ, ಚಿಕ್ಕಮಗಳೂರು ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಎನ್. ಶ್ರೀಕಾಂತ್ ಶೆಟ್ಟಿ ಉಪಸ್ಥಿತರಿದ್ದರು. ಮಂಗಳೂರು ಸಂಸ್ಕಾರ ಭಾರತಿ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಕೆ. ಪುರುಷೋತ್ತಮ ಭಂಡಾರಿ ಮಾತನಾಡಿ, ಬಂಟರ ಸಂಘವು ಇತರ ಸಮುದಾಯದವರಿಗೂ ಮಾದರಿಯಾಗಿರಬೇಕು. ಶೈಕ್ಷಣಿಕವಾಗಿ ಹೆಚ್ಚು ಪ್ರಗತಿ ಹೊಂದಿ ಆಡಂಬರದ ವಿವಾಹಕ್ಕೆ ಕಡಿವಾಣ ಹಾಕಿ ಸರಳ ವಿವಾಹಕ್ಕೆ ಪ್ರೋತ್ಸಾಹಿಸಬೇಕೆಂದರು.

## ಮಹಿಳಾ ವಿಭಾಗದಿಂದ ಕಸೂತಿ ತರಬೇತಿ



ಸಂಘದ ಮಹಿಳಾ ವಿಭಾಗವು ನವಂಬರ್ ತಿಂಗಳ 17, 18 ಮತ್ತು 19 ರಂದು ಆಸಕ್ತ ಮಹಿಳೆಯರಿಗಾಗಿ ಸೀರೆಗೆ ಕುಚ್ಚು ಕಟ್ಟುವ ಕಸೂತಿ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡಿತ್ತು. ಪರಿಣಿತ ತರಬೇತುದಾರರು ಸುಲಭ ರೀತಿಯಲ್ಲಿ ಈ ವಿಧಾನವನ್ನು ಕಲಿಯಲು ಪೂರಕವಾಗುವಂತೆ ಮಾಹಿತಿ ನೀಡಿದರು. ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಈ ಕಾರ್ಯಾಗಾರದಲ್ಲಿ ಪಾಲ್ಗೊಂಡು ಇದರ ಪ್ರಯೋಜನವನ್ನು ಪಡೆದಿರುತ್ತಾರೆ.

ಬಿಡುವಿನ ಸಮಯದಲ್ಲಿ ತಮ್ಮ ಮನೆಯಲ್ಲಿಯೇ ಈ ವೃತ್ತಿಯನ್ನು ಆರಂಭಿಸಿ ಮಹಿಳೆಯರು ಹೇಗೆ ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದೆಂಬ ಸಂದೇಶವನ್ನು ಈ ಕಾರ್ಯಾಗಾರದ ಮೂಲಕ ನೀಡಲಾಯಿತು.

# Mind- and Quantum Healing



Prof. B.M.Hegde

*"The impossibility of conceiving that this grand and wondrous universe, with our conscious selves, arose through chance, seems to me the chief argument for -the existence of God."*

***Charles Darwin 1809-1882.***

Human body is an extension of the human consciousness. The latter is what should be considered human mind. Unlike what we have learnt and are taught, mind is not inside the brain. Human brain, despite the billions of neurones, or nerve cells and their connections called synapses, cannot account for the mind. The mind is not even in the body but mind is all over extending even beyond us into the universal consciousness of which we are individual parts.

Consciousness is fundamental and all else is derived from consciousness. It was Wilder Penfield, a Nobel Prize winning Canadian neurosurgeon, who is the father of the concept which put mind inside the brain by his experiments during neurosurgical operations on a waking patient. He was very proud of his discovery up until his wisdom grew and he realised his mistakes to write thus in 1958: "None of the actions that we attribute to the mind has been initiated by electrode stimulation or epileptic discharges…..there is no area of the grey matter as far as my experience goes, which local epileptic discharge brings to pass what could be called mind action….what the mind does is different. It is not to be accounted for by any neuronal mechanism that I can discover…. To expect the highest brain mechanism or any set of reflexes, however complicated, to carry out what the mind does, and thus perform all the functions of the mind, is quite absurd."The mind is the canvas on which our thoughts are projected and is a part of our consciousness. Our body is a holographic projection of our consciousness. Therefore, we should have complete control over our bodies if we try.

The universal consciousness is that vital energy that runs this world which we can call as 'All that is'-which believers call God and scientists call consciousness. Quantum physics, which turned conventional solid state physics upside down, has an important principle which is that our thoughts determine reality. Early in the 1900's they proved this beyond a shadow of a doubt with an experiment called the double slit experiment. The observer's awareness determines the behaviour of energy at the quantum level. This universe is only our perception. There is no perception without a perceiver. Similarly all living things have their perceptions. While we have our individual universe they have theirs. So to be precise we live in a multiverse and not a universe. This is

well brought out in that beautiful book by Rupert Sheldrake-Dogs That Know WhenTheir Owners Are Coming Home. Consciousness is not contained within the world or matter. Consciousness contains all matter and the world. The universe is therefore, a unified living process. It resembles a hologram. All our advances in material sciences have been external development. We need to look inside for enlightenment which the Eastern sages and rishis have been preaching and practising for eons for peace, tranquillity and happiness for themselves and society in general. Spirituality, therefore, is just sharing and caring for others and in the bargain getting and giving happiness to our fellow humans.

In a special collection of articles published beginning 1 July 2005, Science Magazine celebrates the journal's 125th anniversary with a look forward -- at the most compelling puzzles and questions facing scientists today. A special, free news feature in Science explores 125 big questions that face scientific inquiry over the next quarter-century. Most of these questions, of course, could be answered in Eastern philosophy and in teleology. Nobel Laureate Peter Medawar, pioneer in tissue transplants, in his book Limits ofScience asks some of those questions and answers them in his own inimitable style. He feels that science is only an enterprise like religion which has been designed to answer certain mundane questions but not be able to answer esoteric questions like who am I? Where have I come from?And, Wither am I going?Etc. He compares positive sciences to a railway engine built to run ona track but not be able to fly like an aeroplane.

Nobel Laureate physiologist, Charles Sherrington, in his acceptance speech in 1899 at a young age of 42 when he was appointed as a professor of physiology at Liverpool University said: "Positive sciences cannot answer the question 'why'? They can, at best, answer 'how' or 'how much'? But, not 'why'? Just as a host of brilliant quantum physicists had to go beyond pure materialism to understand the reality of this universe through quantum mechanics we in medicine will have to go beyond our reductionist materialistic medical science. The added advantage is that understanding the mind will enable us to use the mind to heal the body which is but an illusion of the mind. Particle-wave dichotomy where the one changes to the other nearly 1044 times in a second understanding the mind gives birth to quantum healing. Just as a molecule has the blue print of its genes, the mind has a blue print of the body stored safely and it can remodel the body based on the mind understanding the disease process. David Wiebers, an Emeritus professor of Neurology at the Mayo Clinic in his classic, The Theory of Reality, has distilled the wisdom of the progress made in this realm in the last half a century. I strongly recommend that book to readers to understand the intricacies of consciousness.

In conclusion, one could easily say that we (our mind) are the masters of this creation as we alone can determine what manifests from the fields that we control. "There is highly suggestive evidence of the existence of this energetic blueprint (or human energy field) in the new research on DNA which proves that it transmits, receives, and thus reads energy

directly from the field," writes Brandon West. He continues: "If we can change our beliefs about ourselves, and thus if we can change the energy that defines our energy field, then we can change the energetic blueprint which our body aligns with as it re-materializes (after an illness) back into form 1044 times per second." After a heart attack, if outside intervention does not happen, the heart remodels itself so beautifully.

Western medical reductionist research which has almost 95% of its results as only noise but an occasional signal even there is missed by the main stream medical world. Five studies are very important to prove my point above that quantum healing occurs through our minds. The Oxford study of real Placebo even in pain relief, the Harvard study of senior cardiologists going for their annual conference leaving seriously ill patients in their ICUs resulting in better outcomes compared to when they were doing all kinds of interventions in such patients when they were present, death and disability rates falling when doctors went on strike in Israel, and finally Japan with the lowest doctor patient ratio among the 14 industrialised countries having the best health standards, lowest death and disability rates and highest longevity compared to the USA with too many doctors and specialists, must have warned us that we are barking up the wrong tree. RCT study of coronary revascularisation using laser beam did show that with or without surgery (patient was told that the operation went off very well) had similar results. We did not take these serious studies into consideration to find out that the mind eventually heals and not the drugs and surgery that we use except as an emergency quick-fix.


In reality it is easy to think of ourselves as an energy field organizing itself into a body or as pure consciousness through our bodies. Our mind is non –local and not in our brain or body- as detailed above meaning thereby that mind does not need the brain or body to exist. Where IS the mind? Never Mind!

> "Everyone who is seriously involved in the pursuit of science becomes convinced that a spirit is manifest in the laws of the universe - a spirit vastly superior to that of man, and one in the face of which we with our modest powers must feel humble. In this way the pursuit of science leads to a religious feeling of a special sort, which is indeed quite different from the religiosity of someone more naive."
>
> ***Albert Einstein.***


## ನೀವೂ ಬರೆಯಿರಿ!

ಉದಯೋನ್ಮುಖ ಹಾಗೂ ಯುವ ಬರಹಗಾರರಿಂದ ಕಥೆ–ಕವನ, ಲೇಖನ, ಹಾಸ್ಯಬರಹ, ಚುಟುಕುಗಳನ್ನು ಆಹ್ವಾನಿಸುತ್ತಿದ್ದೇವೆ. ತಮ್ಮ ಬರಹಗಳನ್ನು ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಟೈಪ್ ಮಾಡಿ (ಒಂದು ಪುಟಕ್ಕೆ ಮೀರದಂತೆ) ಸಂಘದ ಇಮೈಲ್ : **info@buntsanghablr.com** ಗೆ ಅಥವಾ ಮುದ್ರಿಸಿ ಸಂಘದ ಕಛೇರಿಗೆ ಪ್ರತೀ ತಿಂಗಳ 20ನೇ ತಾರೀಕಿನ ಒಳಗಾಗಿ ಕಳುಹಿಸಬಹುದಾಗಿದೆ.

# ಬೆಂಗಳೂರು ನಗರದ ವಾಹನ ದಟ್ಟನೆ ಹಾಗೂ ವಾಯುಮಾಲಿನ್ಯ ದೆಹಲಿಯ ಮಟ್ಟಕ್ಕೆ ತಲಪುತ್ತಿದೆಯೇ?



ಎ.ಬಿ. ಶೆಟ್ಟಿ

ಪಿಂಚಣಿದಾರರ ಸ್ವರ್ಗ, ಉದ್ಯಾನವನಗಳ ನಗರ, ಚಿತ್ರಮಂದಿರಗಳ ರಾಜಧಾನಿ, ಪಬ್ ಸಿಟಿ, ಸಿಲಿಕಾನ್ ವ್ಯಾಲಿ, ಜಾಗತಿಕ ನಗರ ಎಂದೆಲ್ಲಾ ಕರೆಸಿಕೊಳ್ಳುತ್ತಿದ್ದ ಬೆಂಗಳೂರಿಗೆ ಈಗ ಟ್ರಾಫಿಕ್ ಜಾಮ್ ಸಿಟಿ ಎಂಬ ಹೊಸ ಹೆಸರು ಬಂದಂತಿದೆ. ಒಂದು ಕೋಟಿ ಜನಸಂಖ್ಯೆ ಇರುವ ನಗರದಲ್ಲಿ ಸುಮಾರು 65 ಲಕ್ಷ ವಾಹನಗಳು ಹಾಗೂ ದಿನಾಲೂ ಸುಮಾರು 1500 ನೂತನ ವಾಹನಗಳು ನೊಂದಣಿಯಾಗುತ್ತಿದ್ದು ಮತ್ತು ಹೊರಗಿನಿಂದ ಬರುವ ವಾಹನಗಳನ್ನು ಗಣನೆಗೆ ತೆಗೆದುಕೊಂಡರೆ, ಈ ಹೆಸರಿನ ಸಾರ್ಥಕತೆಯು ಅರ್ಥವಾಗದಿರದು. ವಾಹನ ದಟ್ಟನೆಗೆ ವಾಹನಗಳ ಸಂಖ್ಯೆ ಕಾರಣ ಎನ್ನುವುದು ಅಷ್ಟೇ ಸತ್ಯ. ರಸ್ತೆಯಲ್ಲಿ ಹೊಂಡವೋ. ಹೊಂಡದಲ್ಲಿ ರಸ್ತೆಯೋ ಎನ್ನುವ ಗಲಿಬಿಲಿಯಲ್ಲಿ ವಾಹನಗಳ ವೇಗ ಧರೆಗಿಳಿದು ವಾಹನ ದಟ್ಟನೆಯ ಸಾಲು ಉದ್ಭವಾಗುವುದು ತೀರಾ ಸಾಮಾನ್ಯ. ವಿಚಿತ್ರವೆಂದರೆ. ಯುದ್ಧೋಪಾದಿಯಲ್ಲಿ ಇದಕ್ಕೊಂದು ಖಾಯಂ ಮತ್ತು ದೂರಗಾಮಿ ಪರಿಹಾರವನ್ನು ಮಾಡಬೇಕಾದ ಸಂಬಂಧಪಟ್ಟ ಅಧಿಕಾರಿಗಳು ಮತ್ತು ರಾಜಕಾರಣಿಗಳು ತಲೆಕೆಡಿಸಿಕೊಳ್ಳದೇ, ನಿರ್ಲಿಪ್ತರಾಗಿರುವುದು ಅಥವಾ ಸಮಸ್ಯೆಯ ನಿವಾರಣೆಗೆ ನೆಪಗಳ ಅಡಿಯಲ್ಲಿ ಸಮಯ ಕೇಳುವುದು ನಡೆಯುತ್ತಲೇ ಇದೆ. ಜನತೆ ಕೂಡಾ, ಇದು ನಿತ್ಯ ಜೀವನದ ಅನಿವಾರ್ಯ ಮತ್ತು ಅವಿಭಾಜ್ಯ ಅಂಗ ಎನ್ನುವಂತೆ ಹೊಂದಾಣಿಕೆ ಮಾಡಿಕೊಂಡು ಹೋಗುತ್ತಿದ್ದಾರೆ

## ಈ ವಾಹನ ದಟ್ಟನೆಗೆ ಕಾರಣಗಳೇನು ?

ತೀರಾ ಇತ್ತೀಚಿನವರೆಗೆ ಉಳ್ಳವರು ಮಾತ್ರ ವಾಹನಗಳನ್ನು ಖರೀದಿಸುತ್ತಿದ್ದರು. ಇಂದಿನ ದಿನಗಳಲ್ಲಿ ವಾಹನ ತಯಾರಿಕೆ ಕಂಪನಿಗಳ ಮತ್ತು ಡೀಲರ್‌ಗಳ ಒತ್ತಡದಿಂದ ಹಣಕಾಸು ಸಹಾಯ ಹಾಗೂ ಬ್ಯಾಂಕ್ ಸಾಲಗಳು ಹೆಚ್ಚಾಗಿರುವುದರಿಂದ ಜನಗಳಲ್ಲಿ ವಾಹನ ಖರೀದಿಸುವ ಅವಕಾಶ ಹೆಚ್ಚಾಗುತ್ತಿದೆ. ಅದಲ್ಲದೇ ಕೆಲವು ಮನೆಗಳಲ್ಲಿ ಒಂದಕ್ಕಿಂತ ಹೆಚ್ಚು ವಾಹನಗಳನ್ನು ಹೊಂದಿದ್ದು, ದಿನ ನಿತ್ಯದಲ್ಲಿ ಅದರ ಉಪಯೋಗ ಕೂಡ ಹೆಚ್ಚಾಗುತ್ತಿದೆ. ಪರಿಸರ ಮಾಲಿನ್ಯ ಮಾಡುವ ಹಳೆಯ ಬಸ್ಸುಗಳನ್ನು ಹಾಗೂ ವಾಹನಗಳನ್ನು ಅದೇ ಪ್ರಮಾಣದಲ್ಲಿ ಹಿಂತೆಗೆದುಕೊಳ್ಳುತ್ತಿಲ್ಲ. ವಾಹನಗಳ ಸಂಖ್ಯೆ ಹೆಚ್ಚಿದಂತೆ ರಸ್ತೆಗಳು ಅದೇ ಪ್ರಮಾಣದಲ್ಲಿ ಹೆಚ್ಚಾಗಲಿಲ್ಲ. ಅಗತ್ಯಕ್ಕೆ ತಕ್ಕಂತೆ ರಸ್ತೆಯ ಅಗಲೀಕರಣವಾಗಿಲ್ಲ. ಅಗಲೀಕರಣದ ನಿಟ್ಟಿನಲ್ಲಿ ಎಂದಿನಂತೆ ಚಿಂತನ – ಮಂಥನಗಳು, ಯೋಜನೆಗಳು ಮತ್ತು ಮಾರ್ಕಿಂಗ್‌ಗಳು ನಡೆಯುತ್ತಿವೆ. ಆದರೆ, ಅವು ಎಂದೋ ಕಾರ್ಯಗತವಾಗಬಹುದು ಎನ್ನುವ ವಿಷಯದಲ್ಲಿ ದೃಢವಾದ ಹೆಜ್ಜೆ ಕಾಣುತ್ತಿಲ್ಲ. ದಟ್ಟನೆಯನ್ನು ನೀಗಿಸುವ ದೃಷ್ಟಿಯಲ್ಲಿ ರಚಿಸಲಾದ ಮೇಲು ಸೇತುವೆಗಳು Flawed design ಮತ್ತು ಮುಂದಾಲೋಚನೆಯ ಕೊರತೆಯಿಂದಾಗಿ ನಿರೀಕ್ಷಿತ ಫಲ ನೀಡಿಲ್ಲ. ವಿಳಂಬ ಕಾಮಗಾರಿಯಿಂದಾಗಿ ಜನರು ಮೆಟ್ರೋ ಬಗೆಗೆ ಜಿಗುಪ್ಸೆ ಪಡುತ್ತಿದ್ದಾರೆ. ಹೆಚ್ಚುತ್ತಿರುವ ವಾಹನಗಳು, ಹದಗೆಟ್ಟ ರಸ್ತೆಗಳು, ಹಳೆ ಡೀಸೇಲ್ ವಾಹನಗಳ ಹೊಗೆಯಿಂದ ಹೆಚ್ಚುತ್ತಿರುವ ವಾಯು ಮಾಲಿನ್ಯ ರಸ್ತೆ ಗುಂಡಿಗಳಿಗೆ ತಾತ್ಕಾಲಿಕ ರಿಪೇರಿಗಾಗಿ ಹಾಕಿರುವ ಮಣ್ಣಿನಿಂದ ಭುಗಿದೇಳುವ ಧೂಳು, ಅಗೆದು ಹಾಕಿ ಸರಿಪಡಿಸದೇ ಬಿಟ್ಟಿರುವ ರಸ್ತೆ ಗುಂಡಿಗಳು, ಅಣಬೆ ಕೊಡೆಯಂತೆ ಮೇಲೆ ಬರುತ್ತಿರುವ ಕಟ್ಟಡಗಳ ಕಾಮಗಾರಿ ಚಿಮಣಿಗಳಿಂದ ಬರುವ ಹೊಗೆ, ಜನರೇಟರ್‌ಗಳ ಅವಾಂತರ, ಅದರಲ್ಲೂ ಸರ್ಕಾರದ ಕಾನೂನನ್ನು ಬದಿಗೊತ್ತಿ ಸ್ವ ಇಚ್ಛೆಯಿಂದ ಲಂಗು ಲಾಗಮ್ ಇಲ್ಲದೇ ಫುಟ್‌ಪಾತ್ ಮತ್ತು ರಸ್ತೆಯನ್ನು ಉಪಯೋಗಿಸಿ ಕೊಳ್ಳುತ್ತಿರುವ ಗುತ್ತಿಗೆದಾರರು ಹಾಗೂ ಮಳೆಯ ಅಭಾವದಿಂದ ಹೆಚ್ಚುತ್ತಿರುವ ದೂಳಿನಿಂದ ಜನಸಾಮಾನ್ಯರಿಗೆ ನಿತ್ಯ ನರಕವಾಗುತ್ತಿದೆ. ಟ್ರಾಫಿಕ್ ಜಾಮಿನಿಂದ ಜನರು ಬೇಸತ್ತಿದ್ದಾರೆ.

ನಗರದ ಟ್ರಾಫಿಕ್ ಜಾಮ್ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಿಸುವ ದೃಷ್ಟಿಯಲ್ಲಿ ಸರ್ಕಾರವು ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ನಿರ್ಧಾರವನ್ನು ಬಿಟ್ಟು ಖಾಯಂ ಪರಿಹಾರದತ್ತ ಗಂಭೀರವಾಗಿ ಚಿಂತಿಸಬೇಕಾಗಿದೆ. ಅನುಭವಿಗಳ ಪ್ರಕಾರ ಮೆಟ್ರೋ ವ್ಯವಸ್ಥೆ ಈ ನಿಟ್ಟಿನಲ್ಲಿ ಪರಿಣಾಮಕಾರಿಯಾಗಲಿದ್ದು, ಇದನ್ನು ಯುದ್ಧೋಪಾದಿಯಲ್ಲಿ ತ್ವರಿತಗತಿಯಲ್ಲಿ ಹಳಿ ಏರಿಸುವ ಕಾರ್ಯವಾಗಬೇಕಾಗಿದೆ. ಹಾಗೆಯೇ ರಸ್ತೆಗಳ ಅಗಲೀಕರಣ ಮತ್ತು ನೇರಗೊಳಿಸುವಿಕೆಗೆ ಇರುವ ಆಡಳಿತಾತ್ಮಕ ಮತ್ತು ಕಾನೂನಾತ್ಮಕ ಅಡಚಣೆಗಳನ್ನು ನಿವಾರಿಸಿಕೊಳ್ಳಲು ತ್ವರಿತ ಕ್ರಮ ತೆಗೆದುಕೊಂಡು ಕಾರ್ಯವನ್ನು ಆರಂಭಿಸಬೇಕು. ಇಂಥಹ

ಕಾರ್ಯಗಳು ಚುರುಕುಗೊಳ್ಳಲು ನಾಲ್ಕಾರು ಆಡಳಿತ ವ್ಯವಸ್ಥೆಗಳ ಮಧ್ಯೆ ಹೊಂದಾಣಿಕೆ ಮುಖ್ಯವಾಗಿದ್ದು, ಒಬ್ಬರ ಕೆಲಸದಲ್ಲಿ ಇನ್ನೊಬ್ಬರು ಕೈಯಾಡಿಸದಂತೆ ಸಂಯೋಜನೆ ತರಬೇಕು.

ಬೆಂಗಳೂರಿನ ಹವಾಮಾನ ಮತ್ತು ಕನ್ನಡಿಗರ ಬಹುಭಾಷಾ ಪ್ರೇಮ ಅಥವಾ ಸಹಿಷ್ಣುತೆ ವಲಸಿಗರಿಗೆ ಸ್ವರ್ಗವಾಗಿದೆ. ಅವರು ತಮ್ಮ ತಾಯಿ ನೆಲಕ್ಕಿಂತ ಉತ್ತಮ ಸೌಲಭ್ಯ ಪಡೆಯುತ್ತಿದ್ದು ಮತ್ತು ಸಂತೃಪ್ತ ಜೀವನ ಮಟ್ಟ ಅನುಭವಿಸುತ್ತಿದ್ದು ಇಲ್ಲಿಗೆ ಬಂದವರು ಹೆಚ್ಚಾಗಿ ಯಾರೂ ರಿಟರ್ನ್ ಟಿಕೇಟ್ ತೆಗೆದುಕೊಳ್ಳುವವರು ಕಡಿಮೆ. ಹಾಗೆಂದೇ ಎಲ್ಲವೂ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿದ್ದು, ಬೆಂಗಳೂರಿನ ಮೇಲೆ ಒತ್ತಡ ಹೆಚ್ಚಿದೆ. ನೈಋತ್ಯ ರೈಲು ವಲಯ, ಹೈಕೋರ್ಟ್ ಬೆಂಚ್‌ಗಳನ್ನು ಬೆಂಗಳೂರಿನ ಹೊರಗೆ ಸ್ಥಾಪಿಸಿದಂತೆ ಸರ್ಕಾರದ ಹಲವು ಕಛೇರಿಗಳನ್ನು ವಿಕೇಂದ್ರೀಕರಣಗೊಳಿಸಿದ್ದರೆ, ಈ ಸಮಸ್ಯೆ ಇರುತ್ತಿರಲಿಲ್ಲ. ಬೆಳಗಾವಿಯಲ್ಲಿ ಸುವರ್ಣ ಸೌಧ ಕಟ್ಟಿಸಿದರೂ, ಅಲ್ಲಿಗೆ ಕಛೇರಿಗಳನ್ನು ಸ್ಥಳಾಂತರಿಸಲು ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸುತ್ತಿಲ್ಲ. ಖಾಸಗಿ ವಲಯದಲ್ಲಿ ಯಾರೂ ಬೆಂಗಳೂರು ಬಿಟ್ಟು ಬೇರೆ ನೋಡುವುದಿಲ್ಲ ಬೆಂಗಳೂರಿನ ದಟ್ಟನೆಗೆ ಇನ್ನೊಂದು ಮುಖ್ಯ ಕಾರಣ ನೇರ ಮತ್ತು ಪರೋಕ್ಷವಾಗಿ ಕೆಲಸ ಮಾಡುವ ಸುಮಾರು 25 ಲಕ್ಷ ಟೆಕ್ಕಿಗಳು ಬೆಂಗಳೂರಿನ ಹೊರಗೆ ಲಾಗಿನ್ ಮಾಡಲು ಕಟ್ಟಳೆ ಹಾಕಿದ್ದರೆ, ರಾಜ್ಯದ ಇತರ ಭಾಗಗಳು ಅಭಿವೃದ್ಧಿ ಯಾಗುವುದರೊಂದಿಗೆ ಬೆಂಗಳೂರಿನ ಮೇಲಿನ ಒತ್ತಡ ಕಡಿಮೆಯಾಗುತ್ತಿತ್ತು. ಇಲ್ಲಿಯೂ ಸುಗಮವಾಗಿ ಉಸಿರಾಡಲು ಅವಕಾಶ ಸಿಗುತ್ತಿತ್ತು.

ಬೆಂಗಳೂರಿನ ಬೆಳವಣಿಗೆ ಯೋಜನಾ ಬದ್ಧವಾಗಿ ನಡೆಯುತ್ತಿಲ್ಲ. ಯೋಜನೆಗಳೆಲ್ಲಾ ಕಾಗದಗಳಲ್ಲೇ ಇರುತ್ತಿದ್ದು ಅವು ನಿರೀಕ್ಷೆಯಂತೆ ಕಾರ್ಯಗತವಾಗುತ್ತಿಲ್ಲ. ಕಾರ್ಯಗತ ವಾಗುತ್ತಿರುವ ಕೆಲವು ಯೋಜನೆಗಳು ಕೆಲವರ ಇಚ್ಛೆಯಂತೆ ನಡೆಯುತ್ತಿದೆ. ಇಲ್ಲಿ ನೀತಿ ನಿಯಮಾವಳಿಗಳು ಮತ್ತು ಕಾನೂನನ್ನು ಮರೆಮಾಚಲಾಗುತ್ತದೆ. ಜನಸಾಮಾನ್ಯರ ಹಿತಾ ಸಕ್ತಿಯನ್ನು ಹತ್ತಿಕ್ಕಿ ಯಾವುದೋ ಗೌಪ್ಯ ಮತ್ತು ಅಗೋಚರ ಉದ್ದೇಶಗಳಿಗೆ ಮಾಡಲಾಗುತ್ತದೆ. ವಾಯು ಮಾಲಿನ್ಯ ಇದೇ ರೀತಿ ಮುಂದುವರೆದಲ್ಲಿ ಸದ್ಯದಲ್ಲಿಯೇ ಬೆಂಗಳೂರು ದೆಹಲಿಯನ್ನು ಸಮೀಪಿಸಬಹುದು ಎನ್ನುವ ಭಯ ಆವರಿಸಿದೆ. ಯೂನಿಸೆಫ್ ವರದಿ ಪ್ರಕಾರ ದಕ್ಷಿಣ ಏಷಿಯಾದಲ್ಲಿ ಸುಮಾರು 620 ಮಿಲಿಯನ್ ಮಕ್ಕಳು ವಾಯು ಮಾಲಿನ್ಯದಿಂದಾಗಿ ಅಪಾಯದ ಅಂಚಿನಲ್ಲಿದ್ದಾರೆ. ಐದು ವರ್ಷದ ಕೆಳಗಿನ 6 ಲಕ್ಷ ಮಕ್ಕಳು ವಾಯು ಮಾಲಿನ್ಯ ಪೀಡಿತ ಶ್ವಾಸಕೋಶ ಖಾಯಿಲೆಯಿಂದ ಮರಣಕ್ಕೆ ತುತ್ತಾಗುತ್ತಾರಂತೆ. ಇದರಲ್ಲಿ ಬೆಂಗಳೂರಿನ ಸಂಖ್ಯೆಯೂ ಗಮನಾರ್ಹವಾಗಿದೆ ಎಂದು ಹೇಳಲಾಗುತ್ತಿದೆ. ಸಾರಿಗೆ ದಟ್ಟನೆ, ವಾಯು ಮಾಲಿನ್ಯ ಹಾಗೂ ತತ್ಸಂಬಂಧಿ ಶ್ವಾಸಕೋಶ ಸಂಬಂಧಿ ರೋಗಗಳು ಹೆಚ್ಚಾಗುತ್ತಿದ್ದು, ಇದನ್ನು ತಡೆಯಲು ಗಂಭೀರವಾದ ಪ್ರಯತ್ನವನ್ನು ಮಾಡಬೇಕಾಗಿದೆ. ಸೂಚಿಸುವ ಯಾವುದೇ ಪರಿಹಾರವಾದರೂ ಸಮಸ್ಯೆಯನ್ನು ನೇರವಾಗಿ ನಿಯಂತ್ರಿಸುವಂತಿರಬೇಕು. ಅದು ಸಮಸ್ಯೆಗಳನ್ನು ಉಲ್ಬಣಗೊಳಿಸುವಂತಿರಬಾರದು ಮತ್ತು ನಿವಾರಣೆ ಖಾಯಂ ಆಗಿರಲಿ. ವಾಸಿಪಡಿಸುವುದಕ್ಕಿಂತ ನಿಯಂತ್ರಿಸುವುದು ಆದ್ಯತೆಯಾಗಿರಲು ಜನೋಪಯೋಗಿ ಯೋಜನೆಗಳನ್ನು ನಿರ್ಮಿಸುವಾಗ ರಾಜಕಾರಣಿಗಳು ಮತ್ತು ಅಧಿಕಾರ ಶಾಹಿಗಳಿಗಿಂತ ಜನತೆಯ ಆಶೋತ್ತರಗಳಿಗೆ ಸ್ಪಂದನೆ ದೊರಕುವಂತಾಗಲಿ.

## ಕೇಂದ್ರೀಯ ವಿವಿ ಕುಲಾಧಿಪತಿಯಾಗಿ ಎನ್. ಆರ್. ಶೆಟ್ಟಿ



ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಶಾಲಾಡಳಿತ ಮಂಡಳಿಯ ಸದಸ್ಯ ಡಾ. ಎನ್. ಆರ್. ಶೆಟ್ಟಿಯವರನ್ನು ಕಲಬುರ್ಗಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವ ವಿದ್ಯಾನಿಲಯದ ಕುಲಾಧಿಪತಿಯಾಗಿ ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ನೇಮಕ ಮಾಡಿದೆ.

ಬೆಂಗಳೂರು ವಿವಿ ಕುಲಪತಿ ಆಗಿದ್ದ ಇವರು, ರಾಷ್ಟ್ರೀಯ ಸಲಹಾ ಸಮಿತಿ, ರಾಷ್ಟ್ರೀಯ ವಿಜ್ಞಾನ, ತಂತ್ರಜ್ಞಾನ ಹಾಗೂ ಉದ್ಯಮಶೀಲತೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸ್ಥಾನ ಸೇರಿ ನಾನಾ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಬಂಟರ ಸಂಘದ ಪರವಾಗಿ ಡಾ. ಎನ್.ಆರ್. ಶೆಟ್ಟಿಯವರಿಗೆ ಹಾರ್ದಿಕ ಅಭಿನಂದನೆಗಳು.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE ಯುವ ವಿಭಾಗ ಆಶ್ರಯದಲ್ಲಿ

# ಆಳ್ವಾಸ್ ವಿರಾಸತ್ ಸಾಂಸ್ಕೃತಿಕ ವೈಭವ

## ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ

VIRASAT

3 ಗಂಟೆ 30 ನಿಮಿಷ ನಡೆಯುವ ದೇಶ ವಿದೇಶಗಳ ವಿವಿಧ ಪ್ರಕಾರದ ಶಾಸ್ತ್ರೀಯ, ಜಾನಪದ, ಸಾಂಸ್ಕೃತಿಕ ಕಾರ್ಯಕ್ರಮಗಳು.

1. ಮೋಹಿನಿಯಾಟಂ - ಕೇರಳ ನಟನಂ
2. ಬಡಗುತಿಟ್ಟು ಯಕ್ಷಗಾನ - ಮಧುಮಾಸದ ರೂಪಕ
3. ಆಂಧ್ರದ ಬಂಜಾರ ನೃತ್ಯ
4. ಮಣಿಪುರಿ ಸ್ಟಿಕ್ ಡ್ಯಾನ್ಸ್ (ಸ್ಟಂಟ್)
5. ಶ್ರೀಲಂಕಾದ - ನೃತ್ಯ ವೈಭವ
6. ಮಲ್ಲಕಂಬ (ಸಾಹಸಮಯ ಮಲ್ಲಕಂಬ, ರೋಪ್)
7. ಭರತನಾಟ್ಯ - ಆನಂದ ತಾಂಡವ
8. ಕಥಕ್ - ಆನಂದ ಮಂಗಳಂ ದೇರ್
9. ಗುಜರಾತಿನ - ಹೋಡೋ ರಾಸ್
10. ಮಹಾರಾಷ್ಟ್ರದ ಲಾವಣಿ ನೃತ್ಯ
11. ಪುರುಲಿಯಾ - ಪಶ್ಚಿಮ ಬಂಗಾಳದ ನೃತ್ಯ
12. ತೆಂಕುತಿಟ್ಟು ಯಕ್ಷಗಾನ - ವೇದೋದ್ಧರಣ
13. ಮಣಿಪುರ ಡೋಲ್ ಚಲಮ್
14. ಒರಿಸ್ಸಾ - ಗೋಟಿಪುವ ಮತ್ತು ಯೋಗ ನೃತ್ಯ
15. ಸಮಕಾಲೀನ ನೃತ್ಯ
16. ವಂದೇ ಮಾತರಂ

ಮೊದಲಾದ ಬೆರಗು ಮೂಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು

**18 ಡಿಸೆಂಬರ್ 2016, ಭಾನುವಾರ**

ಸಂಜೆ 4.45 ರಿಂದ 9.30 ರವರೆಗೆ



ವಿ.ಸೂ.
* ಕಾರ್ಯಕ್ರಮವು ಸಮಯಕ್ಕೆ ಸರಿಯಾಗಿ ಸಂಜೆ 4.45ಕ್ಕೆ ಆರಂಭವಾಗುತ್ತದೆ. ದಯವಿಟ್ಟು 15 ನಿಮಿಷ ಮುಂಚಿತವಾಗಿ ಬಂದು ಕೂಡಿಯ ಕಲೆ ಆಸೀನರಾಗಿ ಸಹಕರಿಸಬೇಕಾಗಿ ವಿನಂತಿ.
* ಸಭಾಕಾರ್ಯಕ್ರಮವು ಕೇವಲ 45 ನಿಮಿಷ ಮಾತ್ರ.

### ಸ್ವಾಗತ ಕೋರುವ

**ಸಂತೋಷ್ ಶೆಟ್ಟಿ. ಜಿ**
ಗೌರವ ಕಾರ್ಯದರ್ಶಿ

**ಪ್ರೇಮ್‌ಪ್ರಸಾದ್ ಶೆಟ್ಟಿ**
ಚೇರ್‌ಮೆನ್ - ಯುವ ವಿಭಾಗ

**ಡಿ. ಚಂದ್ರಹಾಸ್ ರೈ**
ಅಧ್ಯಕ್ಷರು

**ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು**



ಸ್ಥಳ : ನ್ಯೂ ಪಬ್ಲಿಕ್ ಸ್ಕೂಲ್ ಮೈದಾನ, ವಿಜಯನಗರ (ಗೋವಿಂದರಾಜನಗರ), ಗಾಯತ್ರಿ ನರ್ಸಿಂಗ್ ಹೋಮ್ ಬಳಿ, ಬೆಂಗಳೂರು

ಬಂಟರ ಸಂಘ ಬೆಂಗಳೂರು

## ವಿವಾಹ ವೇದಿಕೆ - ವಧೂ-ವರರ ಅನ್ವೇಷಣಾ ಸಮಾವೇಶ

**ದಿನಾಂಕ 18.12.2016, ಭಾನುವಾರ ಪೂರ್ವಾಹ್ನ 10 ರಿಂದ**

ಮುಖ್ಯ ಅತಿಥಿಗಳು

**ಶ್ರೀ ಎಂ. ಬಾಲಕೃಷ್ಣ ಶೆಟ್ಟಿ**

ಪ್ರಾಂಶುಪಾಲರು, ಶ್ರೀ ದುರ್ಗಾಪರಮೇಶ್ವರಿ ಕಾಲೇಜು, ಕಟೀಲು

ಅಧ್ಯಕ್ಷತೆ

**ಚಂದ್ರಹಾಸ ರೈ ಡಿ.**

ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು

ಸ್ಥಳ: ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲಾ ಆವರಣ

**ನೀವು ಬನ್ನಿ, ನಿಮ್ಮ ಪರಿಚಯಸ್ಥರಿಗೂ ಈ ಸದಾವಕಾಶವನ್ನು ಉಪಯೋಗಿಸಿಕೊಳ್ಳುವಂತೆ ಪ್ರೇರೇಪಿಸಿ**

**ಸಂತೋಷ್ ಶೆಟ್ಟಿ ಜೆ.**
ಗೌ। ಕಾರ್ಯದರ್ಶಿ

**ಚಂದ್ರಹಾಸ ರೈ ಡಿ.**
ಅಧ್ಯಕ್ಷರು

**ಸುಧಾಕರ ಶೆಟ್ಟಿ ಎಸ್.**
ಸಂಚಾಲಕರು, ವಿವಾಹ ವೇದಿಕೆ

**ಶಕೀಲಾ ಎಸ್. ಶೆಟ್ಟಿ**
ಛೇರ್‌ಮ್ಯಾನ್, ವಿವಾಹ ವೇದಿಕೆ


## ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ನಡೆದ ರಾಜ್ಯೋತ್ಸವ ಸಮಾರಂಭದಲ್ಲಿ ಪುರಸ್ಕೃತರು










Canara Bank
A Government of India Undertaking
Together We Can
Online Instant In-Principle Sanction
Let two beautiful dreams come true in just two minutes!
• Apply online @ www.canarabank.com
• Receive in-principle sanction in just 2 minutes
*Terms and conditions apply
Follow us on : @canarabanktweet
CUSTOMER AWARENESS
Do not share your internet banking details, such as, user ID / password or your credit / debit card number / CVV / OTP with anyone - either over phone or through email
Toll Free No: 1800 425 0018
Save Trees. Save Water. Save Environment.
www.canarabank.com


Nitte Meenakshi Institute of Technology
An Autonomous Institution
Yelahanka, Bangalore - 560 064
NITTE
Accreditation & Recognition
Courses Offered @ NMIT
B.E.
Computer Science & Engg. | Electronics & Communication Engg.
Information Science & Engg. | Electrical & Electronics Engg.
Mechanical Engg. Civil Engg. Aeronautical Engg.
M.Tech
VLSI Design & Embedded Systems | Computer Science & Engg.
Thermal Power Engg. | Machine Design Computer Network Engg.
Structural Engg. | Renewable Energy Digital Communication & Networking
Ph.D
Civil Engineering | Electrical & Electronics Engg.
Computer Science & Engg. | Mechanical Engg.
Electronics & Communication Engg.
Information Science & Engg. | Mathematics | Physics
Chemistry | Management Studies Computer Applications
MBA
MCA
For Admission details Contact
(080) 2216-7842, 2216-7800, 99866 12287
admissions@nmit.ac.in / principal@nmit.ac.in
www.nmit.ac.in
NITTE School of Management (NSM, Bangalore)
Yelahanka, Bangalore – 560 064
Phone : 080-2216-7888 | Mobile : +91 90360-04262
E-mail : admissions@nsom.ac.in
Facebook: https://www.facebook.com/NSMBangalore
Courses Offered @ NSOM
PGDM General Management
Executive PGDM
Specialisation
Finance | Banking | Marketing | Human Resource (HR)
Information Technology (IT) | International Business (IB) | Media Management
Operations and Logistics
Dr. NITTE SHANKARA ADYANTHAYA MEMORIAL
FIRST GRADE & P.U. COLLEGE
(Affiliated to Bangalore University & Dept. of P.U. Education respectively)
Yelahanka, Bangalore – 560 064
Phone: 080-6566-6956/ 080-2216-7895/ 080-2216-7950 Fax: 080-28461274
Email: nsamfgcye@gmail.com / nsampucb@nitte.edu.in
Courses Offered
PUC - Science : PCMB & PCMC
PUC - Commerce : EBAS, EBABM, EBACS
B.Com
BBA
NITTE INTERNATIONAL SCHOOL
No 12, Mvllappanahalli, Heseragetta Hobli, Yelahanka, Bangalore North,
E mail: nis.bangalore@rediffmail.com www.nis.ac.in
Affiliated with CBSE, New Delhi | Day cum Residential School | Kindergarten to 10+2

ADVT.


Grand Vijaya Housing & Vehicle Loan Carnival*
Limited Period offer
* Waiver of processing, inspection & Documentation Charges
* conditions apply
VIJAYA BANK

ADVT.


CHARIOT
WORLD TOURS LIMITED
www.chariotworldtours.com
See Europe without missing India.
On a Europe tour, we make sure you get Indian food daily. So that you can comfortably enjoy the exotic destinations of Europe, while feeling at home.
SCOTLAND & LONDON TOUR
07 DAYS/06 NIGHTS
EUROPE TOUR
19 DAYS/18 NIGHTS
SCOTLAND, LONDON - EUROPE TOUR
22 DAYS/21 NIGHTS
DEPARTURE DATES FOR - 2016
Month | 4 Star Hotels | 3 Star Hotels
April | 20, 21, 23, 24 26, 27, 29, 30 | 22, 25, 28
May | 02, 04, 08, 10, 14 16, 20, 22, 26, 28 | 06, 12, 18 24, 30
June | 06, 13, 27 | 20
Jagannath Shanbhag: 9900003559 | Rajesh Hebbar: 9900062680
Our Branches: Malleshwaram | Vijayanagar | Jayanagar | Cunningham Road | Indiranagar | RT Nagar | Whitefield Hesaraghatta | Mysore | Hubli | Davanagare
Our Franchisee Network: Vijayanagar, Majestic, Kalyan Nagar, Rajaji Nagar, Yelahanka, JP Nagar, Koramangala, New BEL Road, Raja Rajeshwari Nagar, Sahakar Nagar, Chitradurga, Tumkur, Belgaum, Hyderabad

ADVT.

Creating life-long bonds

SINCE 17 Years

N. Santhosh Kumar Shetty
B.E. (Civil)
Managing Director

Budget Flats 18 Lakhs Onwards
(Including Vat, Service Tax, and Deposits)

Just Pay ₹2 Lakhs*
to Book your Dream Home.



1 MATHA Emerald
2 MATHA Opal
3 MATHA Ruby
4 MATHA Diamond
5 MATHA Pearl
6 MATHA Crystal

SAI MATHA GARDEN
Near Railway Station International Airport Road, Surathkal

Highlights

- Super Market
- Library
- Yoga / Meditation Hall
- Fully Equipped Gymnasium
- Children's Swimming Pool
- Children's Play Area And Land-scaped Garden
- Outdoor Badminton Court



MATHA Residency Mulky
NH66, Mulky



MATHA Jyothi Residency
Near NITK Engineering College & Srinivas Institute of Technology Mukka, Surathkal

Project Loan Approved in all Nationalized Bank

MATHA Builders & Developers
Developers Pvt. Ltd

**Surathkal:** Thara Towers, 2nd Floor, Airport Road, Surathkal, Mangaluru - 575 014.

**Mumbai:** Shop No. 8, Bldg. No. 1, New Venkateshwar Nagar, Cabin Road Bhayandar (E), Thane Dist - 401 105.

9980711966, 7022481666
7259209966, 7259269966(Mumbai)

mathadevelopers108@gmail.com
www.mathadevelopers.com

CREDAI

Best Investment with Assured Rental Return

ADVT.

# ಮುದ್ದು ಕಂದ

## ಮಕ್ಕಳ ಫೋಟೋ ಸ್ಪರ್ಧೆ




ಪ್ರಥಮ ಬಹುಮಾನ
ಶೋಧನ್ ಎಂ. ಶೆಟ್ಟಿ
ಮಧುಸೂದನ್ ಶೆಟ್ಟಿ ಮತ್ತು
ಪಲ್ಲವಿ ಎಸ್. ಶೆಟ್ಟಿ





ಗಮನ್ ಶೆಟ್ಟಿ



ಸಾಂಚು ಸಿರಿ




ಶ್ರೀಶಾ ಕೆ. ಶೆಟ್ಟಿ




ಪ್ರಣವ್ ಹೆಚ್. ಶೆಟ್ಟಿ


ತೃತೀಯ ಬಹುಮಾನ
ಸ್ವರೂಪ್ ಸಿ. ಶೆಟ್ಟಿ
ಚಂದ್ರಶೇಖರ್ ಶೆಟ್ಟಿ
ಮತ್ತು ದಿವ್ಯ ಶೆಟ್ಟಿ



ಆರಾಧ್ಯ ಬಿ. ಶೆಟ್ಟಿ



ಸಂಭ್ರಮ ಬಿ. ರೈ



ಸಿಂಚನ ಆಳ್ವ



ಧೃತಿಕಾ ಎಂ. ಶೆಟ್ಟಿ

## ಮಕ್ಕಳ ಫೋಟೋ ಸ್ಪರ್ಧೆಗೆ


ನಮ್ಮ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆ ನೀಡಿದ ತಮಗೆ ಧನ್ಯವಾದಗಳು. ವಿಜೇತರಿಗೆ ಸ್ಥಾಪಕರ ದಿನಾಚರಣೆಯ ಸಮಾರಂಭದಲ್ಲಿ ಬಹುಮಾನಗಳನ್ನು ನೀಡಲಾಗುವುದು.


– ಸಂ

**ತೀರ್ಪುಗಾರರ ಮಾತು:**
ಕಲ್ಮಶವಿಲ್ಲದ ಸುಂದರ ಮುಖ, ಮುಗ್ಧ ನಗು, ಪುಟ್ಟ ಪುಟ್ಟ ಕೈಗಳು, ಕಾಲುಗಳು, ಪಿಳಿ ಪಿಳಿ ಕಣ್ಣುಗಳಿರುವ ಮಗುವನ್ನು ಕಂಡರೆ ದೊಡ್ಡವರ ಪಾಲಿಗೆ ಅವರು ದೇವರೇ! ಮಕ್ಕಳನ್ನು ದೇವರು ಅನ್ನುವುದು ಸುಳ್ಳಲ್ಲ. ಇಂತಹ ಮಕ್ಕಳ ಫೋಟೊ ಸ್ಪರ್ಧೆಯಿಟ್ಟು ವಿಜೇತರನ್ನು ಆಯ್ಕೆ ಮಾಡುವುದಕ್ಕೆ ನಮ್ಮನ್ನು ಕರೆಸಿದರೆ ಏನಾಗಬಹುದು ಹೇಳಿ! ಆದರೂ ನಾವು ಒಂದಿಷ್ಟು ಮುಜುಗರದಿಂದಲೇ ವಿಜೇತರನ್ನು ನಿಮ್ಮ ಮುಂದಿಟ್ಟಿದ್ದೇವೆ. ಕ್ಯಾಮರದ ಫ್ರೇಮಿನಲ್ಲಿ ಮಕ್ಕಳ ನಗು, ಮುಖಭಾವ, ನೈಜ್ಯತೆ ಮತ್ತು ಛಾಯಾಚಿತ್ರದ ಗುಣಮಟ್ಟವನ್ನು ಆಧರಿಸಿ ನೋಡಿದಾಗ ತೋಶನ್, ಇಶಾನಿ ಮತ್ತು ಸ್ವರೂಪ್ ಈ ಮೂರು ಮಕ್ಕಳು ತುಂಬಾ ಇಷ್ಟವಾದರು. ಈ ಸ್ಪರ್ಧೆಯಲ್ಲಿ ಭಾಗವಹಿಸಿ, ನಮಗೆ 'ದೇವರುಗಳನ್ನು' ನೋಡುವ ಭಾಗ್ಯ ಕೊಟ್ಟ ಎಲ್ಲಾ ಹೆತ್ತವರಿಗೂ ವಂದನೆಗಳು.




**ದ್ವಿತೀಯ ಬಹುಮಾನ**
**ಇಶಾನಿ ನಿತೇಶ್ ರೈ**
ಡಾ। ನಿತೇಶ್ ರೈ ಮತ್ತು ಡಾ। ಶಿವಾನಿ ರೈ


ಸ್ತುತಿ ವಿ. ಶೆಟ್ಟಿ


ಶಾಂತಿ ಶೆಟ್ಟಿ ಎಸ್.



ಆರುಷ್ ಎಸ್. ಶೆಟ್ಟಿ


ಪ್ರಣತಿ ಶೆಟ್ಟಿ


ರುಹಾನಿ ಶೆಟ್ಟಿ


ಲಕ್ಷ್



ಸ್ವಸ್ತಿ ಆರ್. ಶೆಟ್ಟಿ


ಲಿಶಿತಾ ಶೆಟ್ಟಿ


ರಿದ್ಧಿ ಆರ್. ಶೆಟ್ಟಿ

**ತೀರ್ಪುಗಾರರು**


ಪ್ರಕಾಶ್ ಶೆಟ್ಟಿ,
ವ್ಯಂಗ್ಯ ಚಿತ್ರಕಾರರು


ಪಾಂಡ್ಯನ್,
ವೃತ್ತಿಪರ ಛಾಯಾಚಿತ್ರ ಗ್ರಾಹಕರು

ADVT


Mangalore is Smart.
Time to make a Smart move.
Celebrating 30 years
BRIGADE
Ready to Occupy homes
CREDAI
Recently it has been announced that Mangalore would be developed as a Smart City with an investment of ₹3000-4000 crores*. This means the city would be clean, green, pollution-free, powered by solar / wind energy, have waste recycling plants, bio-fuel vehicles, e-connectivity, excellent mass transport and more. Leverage this opportunity by investing in Brigade Pinnacle and assure yourself of excellent value appreciation over the years. Located in Derebail and well-connected to schools, hospitals, shopping facilities and even the Airport, Brigade Pinnacle is the smartest investment option in Mangalore today. Book today. It is the smartest move you'll ever make!
2 & 3-bedroom luxury residences
1200 – 1770 sq.ft
51 lakh* onwards
• Clubhouse with gym, swimming pool, recreation zone & more • Exquisite landscaping
Contact: 1800 102 9977 | salesenquiry@brigadegroup.com
BRIGADE
PINNACLE
DEREBAIL, MANGALORE
BrigadePinnacle.com
ADVT.


Pana Pre-Uni College is the brainchild of Pana Education & People Alliance (PEPA), Mangalore. The trustees at PEPA felt the deep desire to change how we teach and how we learn. Not being satisfied with students taking home just another certificate at the end of the day, the trustees took it upon themselves to come up with an institution that would not just match up to, but also exceed world standards.
40 ACRE LUSH GREEN CAMPUS
STATE OF THE ART INFRASTRUCTURE
Own
OWN A REVOLUTIONARY NEW LEARNING METHOD
PERSONAL CARE AND COUNSELLING SESSIONS
HIGH QUALITY HOMELY HYGIENIC FOOD
WELL QUALIFIED MENTORS
CET/JEE/NEET NATA/CLAT/CPT COACHING
LEARNING FROM NATURE - OUTDOOR + INDOOR ACTIVITIES
SPACIOUS AND SECURE HOSTEL ACCOMMODATIONS
Pañā
Pre-Uni College
Kolambe, Bajpe, Mangalore - 574142
ADMISSIONS OPEN - P.U.C I
ARTS, SCIENCE AND COMMERCE
CONTACT US www.panalearning.com
www.facebook.com/panaown | mailbox@pana.global
+91 88 6131 3388 / +91 81 5199 3388
+91 88 6142 9988 / +91 70 2260 5081

ADVT.

# 'ಹಸುರು' ವಸ್ತುಗಳನ್ನೇ ಖರೀದಿಸಿ ಮಾಲಿನ್ಯ ನಿಯಂತ್ರಣಕ್ಕೆ ಸಹಕರಿಸಿ

ಹಸುರು ಬದುಕಿನಲ್ಲಿ ಖುಷಿಯಿದೆ; ನೆಮ್ಮದಿ ಇದೆ. ಈ ಭೂಮಿಗೆ ರಕ್ಷಣೆ ಇದೆ

## ಏನಿದು ಹಸುರು ಬಳಕೆ?

- ನಮ್ಮ ನಿತ್ಯ ಜೀವನದ ಅಗತ್ಯಗಳಿಗಾಗಿ ದಿನವೂ ಏನೆಲ್ಲ ಖರೀದಿಸುತ್ತೇವೆ.. ಆಹಾರ ಪದಾರ್ಥಗಳು, ಮನೆ ಬಳಕೆಯ ವಸ್ತುಗಳು, ಉಡುಗೆ-ತೊಡುಗೆಗಳು, ಸಾಧನ ಸಲಕರಣೆಗಳು, ವಾಹನಗಳು, ಗ್ರಾಹಕ ಬಳಕೆಯ ಉತ್ಪನ್ನಗಳು... ಇವೆಲ್ಲವೂ ಬಳಕೆಯಾದ ಮೇಲೆ ಎಲ್ಲಿಗೆ ಹೋಗುತ್ತವೆ? ಒಮ್ಮೆ ಯೋಚಿಸಿ. ಮರುಬಳಕೆಯಾಗಿಯೋ, ವಿಷ ಉಣಿಸದೆ ನೆಲದಲ್ಲಿ ಕರಗಿಯೋ ಇವೆಲ್ಲ ವಸ್ತುಗಳೂ ವಿಲೇವಾರಿ ಆಗುವಂತಿದ್ದರೆ ಎಷ್ಟು ಚೆನ್ನಾಗಿರುತ್ತದೆ ಅಲ್ಲವೆ? ಹೀಗೆ ಮಾಲಿನ್ಯವನ್ನು ನಿಯಂತ್ರಿಸುವ, ಪರಿಸರ ರಕ್ಷಿಸುವ, ನಮ್ಮ ಆರೋಗ್ಯವನ್ನೂ ಕಾಪಾಡುವ ಹಾಗೆ ಬದುಕನ್ನು ರೂಪಿಸಿಕೊಳ್ಳುವುದೇ ಹಸುರು ಬಳಕೆ.

## ಹಸುರು ಬದುಕಿಗೆ ನೀವೇನು ಮಾಡಬೇಕು?

- ಪ್ರತಿದಿನ ಖರೀದಿಗೆ ಮನೆಯಿಂದ ಹೊರಡುವಾಗಲೇ ಏನು ಬೇಕು ಎಂಬುದನ್ನು ಪಟ್ಟಿ ಮಾಡಿಕೊಳ್ಳಿ; ವಸ್ತುಗಳನ್ನು ತರಲು ಬಟ್ಟೆಯ ಚೀಲವನ್ನು ಇಟ್ಟುಕೊಂಡೇ ಹೊರಡಿ.
- ಖರೀದಿ ಮಾಡುವಾಗ ದೊಡ್ಡ ಅಥವಾ ಮರುಬಳಕೆ ಮಾಡಬಹುದಾದ ಪ್ಯಾಕುಗಳನ್ನೇ ಖರೀದಿಸಿ.
- ಸ್ಥಳೀಯ ತರಕಾರಿ, ದಿನಸಿ ಉತ್ಪನ್ನಗಳನ್ನೇ ಖರೀದಿಸಿ; ಸರಕು ಸಾಗಾಟ ಕಡಿಮೆ ಮಾಡಿದಷ್ಟೂ ಪರಿಸರಕ್ಕೆ ಉತ್ತಮ.
- ನಿತ್ಯಜೀವನದಲ್ಲಿ ರಾಸಾಯನಿಕಗಳ ಬಳಕೆ ಕಡಿಮೆ ಮಾಡಿ. ಬದಲಿಗೆ, ಈಗ ಮಾರುಕಟ್ಟೆಯಲ್ಲಿ ಸಿಗುವ ನೂರಾರು ನಿಸರ್ಗದತ್ತ ಉತ್ಪನ್ನಗಳನ್ನು ಆಯ್ಕೆ ಮಾಡಿಕೊಳ್ಳಿ.
- ಜೈವಿಕ ಇಂಧನದ ಬಳಕೆಗಾಗಿ ನೀವೂ ಮುಂದಾಗಿ; ಪಾಳು ಜಾಗದಲ್ಲಿ, ಬೀದಿ ಬದಿಯಲ್ಲಿ ಜೈವಿಕ ಇಂಧನ ಕೊಡುವ ಗಿಡಮರಗಳನ್ನು ಬೆಳೆಯಿರಿ.
- ಆದಷ್ಟೂ ಪ್ಲಾಸ್ಟಿಕ್ ಬಳಕೆಯನ್ನು ತಗ್ಗಿಸಿ; ತ್ಯಾಜ್ಯಗಳನ್ನು ಮರುಬಳಕೆಗೆ ಕೊಡಿ.
- ಕಚೇರಿಯಲ್ಲಿ ಕಾಗದದ ಬಳಕೆಯನ್ನು ಮಿತಗೊಳಿಸಿ. ಪ್ರಿಂಟ್ ತೆಗೆಯಲೇ ಬೇಕಾದಾಗ ಎರಡೂ ಬದಿ ಬಳಸಿ.
- ಮನೆ-ಕಚೇರಿಗಳಲ್ಲಿ ವಿದ್ಯುತ್ ಬಳಕೆ ನಿಯಂತ್ರಿಸಿ; ಸಿಎಫ್‌ಎಲ್/ಎಲ್ಇಡಿ ಬಲ್ಬುಗಳನ್ನು ಬಳಸಿ. ಸ್ನಾನಕ್ಕಾಗಿ ಸೌರ ಶಕ್ತಿಯ ವಾಟರ್ ಹೀಟರ್ ಬಳಸಿ.
- ಮನೆಯ, ಕಚೇರಿಯ ಕಸವನ್ನು ವಿಂಗಡಿಸಿ, ಮರುಬಳಕೆಗೆ ಕೊಡಿ. ಗ್ರಾಹಕರಾದ ನಾವು ಕಸವನ್ನೂ ನಿರ್ವಹಣೆ ಮಾಡಿದಾಗಲೇ ಹಸುರು ಬಳಕೆದಾರರಾಗುತ್ತೇವೆ!

ಹಸುರು ಖರೀದಿ
ಸಂಸ್ಕೃತಿ ಬೆಳೆಸಿಕೊಳ್ಳೋಣ.

ಕೊಳ್ಳುಬಾಕ ಪ್ರವೃತ್ತಿಗೆ
ಕಡಿವಾಣ ಹಾಕೋಣ.

ನಿಸರ್ಗದೊಂದಿಗೆ
ಸಹಬಾಳ್ವೆ ನಡೆಸೋಣ

ಪರಿಸರ ಮಾಲಿನ್ಯಕ್ಕೆ
ವಿದಾಯ ಹೇಳೋಣ!

ಮಂಡಳಿಯ ಫೇಸ್‌ಬುಕ್
ಪುಟಕ್ಕೆ ಭೇಟಿ ನೀಡಿ
www.facebook.com/kspcbofficial

ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಿಸಿದವರು

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು 560001

www.kspcb.gov.in

ADVT.


ಭಾರತೀಯ ಜನತಾ ಪಾರ್ಟಿಯ
ಬೆಂಗಳೂರು ಮಹಾನಗರ ಹೋಟೇಲ್
ಮಾಲೀಕರ ಪ್ರಕೋಷ್ಠದ ಸಂಚಾಲಕರಾಗಿ
ಆಯ್ಕೆಯಾದ
ಬಂಟ ಸಮುದಾಯದ ಯುವ ನೇತಾರ,
ಕಲಾ ಪೋಷಕ, ಯಶಸ್ವಿ ಉದ್ಯಮಿ ಹಾಗೂ
ಸಮಾಜಸೇವಕರಾದ
ಶ್ರೀಯುತ ಹೆಚ್.ಎಸ್. ರಾಘವೇಂದ್ರ ಶೆಟ್ಟಿ ರವರಿಗೆ
ಆತ್ಮೀಯ ಅಭಿನಂದನೆಗಳು.
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಮಹಾಲಕ್ಷ್ಮೀಪುರ ವಿಧಾನಸಭಾ ಕ್ಷೇತ್ರ.
ಸಂಸ್ಥಾಪಕಧ್ಯಕ್ಷರು, ಸಮಾನ ಮನಸ್ಕ ಸ್ನೇಹಿತರ ವೇದಿಕೆ (ರಿ), ಬೆಂಗಳೂರು.
ಉಪಾಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಮಹಾಲಕ್ಷ್ಮೀಪುರ ವಿಧಾನಸಭಾ ಕ್ಷೇತ್ರ.
ಹೊನ್ನೆಕೇರಿ ಸುಧಾಕರ ಶೆಟ್ಟಿ
ಲೆಕ್ಕಪರಿಶೋಧಕರು
ಹೆಚ್.ವಿ.ಎಸ್. ಶೆಟ್ಟಿ ಅಂಡ್ ಕಂಪನಿ.
ಬಿ. ನವೀನ್ ಶೆಟ್ಟಿ
ಜೀವನ್ ಶೆಟ್ಟಿ
ಶ್ರೀ ಅಯೋಧ್ಯ ಗ್ರೂಪ್ ಆಫ್ ಹೋಟೇಲ್ಸ್
ಬೆಂಗಳೂರು
ಎಂ. ಸಂತೋಷ್‌ಕುಮಾರ್ ಶೆಟ್ಟಿ
ಸನ್ನಿಧಿ ವೆಜ್ ಗ್ರೂಪ್ ಆಫ್ ಹೋಟೇಲ್ಸ್
ಬೆಂಗಳೂರು

ADVT.


CANARA TOURS & TRAVELS PVT. LTD.
....... good people to travel with
PRESENTS
IATA Approved
OUR FORTHCOMING TOURS
4 NTS / 5 DAYS PACKAGE TOUR TO
DUBAI & ABU DHABI
Be A Part of World famous Dubai Festival 2017
FROM 18TH JANUARY 2017 TO 22ND JANUARY 2017
Cost : Rs. 56,500 (Ex-Mangalore) Rs. 64,500 (Ex-Mumbai/Bangalore)
2 NTS. / 3 DAYS PILGRIMAGE TOUR TO
VAISHNO DEVI
FROM 24TH FEBRUARY TO 26TH FEBRUARY, 2017
Cost : Rs. 22500/- Ex-Mumbai
Rs. 9000 + Airfare Ex-Bangalore & Mangalore
14 Nts. / 15 DAYS PACKAGE TOUR TO
EUROPE
Places of Visit : London (2Nts.), Paris (2Nts.) Belgium, Netherlands, Germany, Austria (1Nt. Each) Switzerland (3Nts), Italy (2Nts), Flight (1Nt).
FROM 24TH APRIL 2017 TO 7TH MAY 2017
Cost : Rs. 2,25000/-
9 NTS / 10 DAYS PACKAGE TOUR TO
AUSTRALIA
Places of Visit : Sydney (3 Nts.), Cairns (2 Nts.) Gold Coast (3 Nts.) Flight (1Nt.)
FROM 14TH MAY 2017 TO 23rd MAY 2017
Cost : Rs. 220000/- (Approx)

ADVT.


10 NTS / 11 DAYS PACKAGE TOUR TO
SCENIC NEW ZEALAND
FROM 22nd MAY 2017 TO 1st JUNE 2017
Places of Visit : Auckland (2Nts.), Rotorua (2Nts), Queenstown (3Nts)
Franz Joseph (1Nt.) Christchurch (1Nt) Flight (1Nt.)
Cost : Rs. 220000/-
5 NT / 6 DAYS PACKAGE TOUR TO
SINGAPORE & MALAYSIA
Places of Visit : Kaulaumpur + Genting (2Nts.) Singapore (3Nts.)
FROM 30TH MAY 2017 TO 4TH JUNE 2017
Cost : Rs. 85000/- Ex-Mumbai & Bangalore
14 NTS / 15 DAYS PACKAGE TOUR TO
CANADIAN ROCKIES
WITH ALASKAN CRUISE
Places of Visit : Toronto (1Nt), Banff (2Nts.), Jasper (2Nts.), Kamploops (1Nt),
Whistler (1Nts.), Vancouver (1Nt), Cruise from Seattle to Seattle (7Nts.),
FROM 9TH JUNE 2017 TO 25TH JUNE 2017
Cost : Rs. 3,70,000/- with Business Class ticket on Emirate Flight : Rs. 5,01000/-
16 NTS / 17 DAYS PACKAGE TOUR TO
AMERICA
New York - (2Nts) Washington (1Nt) - Niagara (1Nt) - Orlando (3Nts) - Caribbean Cruise (3Nts)
Las Angeles (2Nts) - Las Vegas (2Nts) - Sanfrancisco (1Nts), Flight (1Nt).
FROM 8TH JULY 2017 TO 24TH JULY 2017
Cost : Rs. 3,76000/- (Approx)
For any further details please contact:
IATA Approved
Canara Tours & Travels Pvt. Ltd
...... GOOD PEOPLE TO TRAVEL WITH
Mr. T. T. Mada - 9820632934
H.O.: 2, Srishti Complex, Opp. L & T Gate No.7, Saki Vihar Rd., Powai, Mumbai-400 072. Tel.: +91-022-42215000 / 30 Lines
Mr. S. B. Shetty - 9820510043 • E : sbshetty@canaratravels.com
101, Udyog Kshetra, Link Road, Mulund (W), Mumbai-400 080. Tel.: +91-022-41115000 / 30 Lines
Mr. Suresh Ajila - 09448089189 • E : sureshajila@hotmail.com
B-1201 Mittal Tower, M. G. Road, Bangalore 560001. Tel.: +91-080-40993342 / 40993343 / 40993345
Mr. Nagaraj Shetty K. Tel.: 0824 4258505/06/07 08454890888 E : nshetty@canaratravels.com
G/3. Inland Ornate Opp. Ocean Pearl. Navabharath Circle, Kodialbail. Mangalore-575003. Tel.: +91-0824-4258505 / 06 / 07
ADVT.

# ಅಭಿನಂದನೆಗಳು

# ಬೆಂಗಳೂರು ತುಳು ಕೂಟ (ರಿ.)

## ನೂತನ ಪದಾಧಿಕಾರಿಗಳು 2016-2018



**ಶ್ರೀ ಸುಂದರ್ ರಾಜ್ ರೈ**
ಪ್ರಧಾನ ಕಾರ್ಯದರ್ಶಿ



**ಶ್ರೀ ಕೆ. ಜಯರಾಮ್ ಸೂಡ**
ಅಧ್ಯಕ್ಷರು



**ಶ್ರೀ ಬಿ. ದಿನೇಶ್ ಹೆಗ್ಡೆ**
ಉಪಾಧ್ಯಕ್ಷರು



**ಶ್ರೀ ಅಜಿತ್ ಹೆಗ್ಡೆ ಕೆ.**
ಸಂಘಟನಾ ಕಾರ್ಯದರ್ಶಿ





**ಶ್ರೀ ಯು. ರಾಜಾರಾಂ ಶೆಟ್ಟಿ**
ಜೊತೆ ಕಾರ್ಯದರ್ಶಿ

ಬೆಂಗಳೂರು ತುಳು ಕೂಟಕ್ಕೆ ನೂತನ ಪದಾಧಿಕಾರಿಗಳಾಗಿ ಆಯ್ಕೆಯಾದ ಬಂಟರ ಸಂಘದ ಸದಸ್ಯರುಗಳಾದ ಇವರಿಗೆ ಹಾರ್ದಿಕ ಶುಭ ಕೋರುವ.

**ಶ್ರೀ ಪ್ರೇಮ್ ಪ್ರಸಾದ್ ಶೆಟ್ಟಿ**
ಚೇರ್‌ಮೆನ್, ಯುವ ವಿಭಾಗ

**ಶ್ರೀ ರಮಿತ್ ಬಿ. ಶೆಟ್ಟಿ**
ಚೇರ್‌ಮೆನ್, ವಿದ್ಯಾರ್ಥಿ ವೇತನ ಸಮಿತಿ

ADVT.

## ಬಂಟರ ಸಂಘ ಬೆಂಗಳೂರು –ಸಾಂಸ್ಕೃತಿಕ ವಿಭಾಗ
## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ–2016–17

ಸ್ಥಳ : ಬಂಟರ ಸಂಘದ ಆವರಣ

| | |
|---|---|
| 07.01.2016, ಶನಿವಾರ ಮಧ್ಯಾಹ್ನ 02.30 ರಿಂದ, | ರಂಗೋಲಿ ಚಿತ್ರ ಬಿಡಿಸುವುದು |
| 07.01.2016, ಶನಿವಾರ ಸಂಜೆ 05.00 ರಿಂದ | ಅಂತ್ಯಾಕ್ಷರಿ – ಹಿಂದಿ ಮತ್ತು ಕನ್ನಡ |
| 08.01.2017, ಭಾನುವಾರ, ಪೂರ್ವಾಹ್ನ 09.30 ರಿಂದ | ಛದ್ಮವೇಷ ಆಶು ಭಾಷಣ (ಕನ್ನಡ/English ) |
| 08.01.2017, ಭಾನುವಾರ, ಮಧ್ಯಾಹ್ನ 02.30 | ಸಂಗೀತ ಶಾಸ್ತ್ರೀಯ ಸಂಗೀತ<br>(ಹಿಂದೂಸ್ಥಾನಿ/ಕರ್ನಾಟಕ )<br>ಸಿನಿಮಾ ಗೀತೆಗಳು<br>ಸುಗಮ ಸಂಗೀತ – ಸಮೂಹ ಗಾನ |
| 15.01.2017, ಭಾನುವಾರ, ಪೂರ್ವಾಹ್ನ ಬೆಳಿಗ್ಗೆ 9.30 ರಿಂದ, | ನೃತ್ಯ – ಶಾಸ್ತ್ರೀಯ ನೃತ್ಯ<br>ಜಾನಪದ ನೃತ್ಯ – ಫ್ರೀ ಸ್ಟೈಲ್<br>ಜೋಡಿ ನೃತ್ಯ – ಸಮೂಹ ನೃತ್ಯ |

**ನೊಂದಾಯಿಸಲು ಕೊನೆಯ ದಿನಾಂಕ ;**

**ದಿನಾಂಕ 07.01.2017 ಮತ್ತು 08.01.2017 ರಂದು ನಡೆಯುವ ಸ್ಪರ್ಧೆಗಳಿಗೆ : 31.12.2017**

**ದಿನಾಂಕ 15.01.2017 ರಂದು ನಡೆಯುವ ಸ್ಪರ್ಧೆಗಳಿಗೆ : 09.01.2017**

## ಬಂಟರ ಸಂಘ ಬೆಂಗಳೂರು
## ಕ್ರೀಡಾ ಸಮಿತಿ

ಆತ್ಮೀಯ ಸದಸ್ಯರೇ,

2016–17 ನೇ ಸಾಲಿಗೆ ಕ್ರೀಡಾ ಸಾಧನಾ ಪ್ರಶಸ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದ್ದೇವೆ.

**ಅರ್ಹತೆಗಳು**

1. ತಮ್ಮ ಸಾಧನೆಗಳು ಕಳೆದ ಸಾಲಿನಲ್ಲಿ ಪ್ರಶಸ್ತಿ ಸ್ವೀಕರಿಸುವುದಕ್ಕಿಂತ ಹೆಚ್ಚಿನದಾಗಿರಬೇಕು.
2. ತಾವು ದೇಶ, ರಾಜ್ಯ ಅಥವಾ ವಲಯವನ್ನು ಪ್ರತಿನಿಧಿಸಿರಬೇಕು. ಇಲ್ಲವೇ ಅಖಿಲ ಭಾರತ ಅಂತರ – ವಿಶ್ವವಿದ್ಯಾಲಯ ಕ್ರೀಡಾಕೂಟಗಳಲ್ಲಿನ ಪ್ರಶಸ್ತಿ/ ಪದಕ ವಿಜೇತರಾಗಿರಬೇಕು.
3. ತಾವು ಭಾಗವಹಿಸುವ ಎಲ್ಲಾ ಸ್ಪರ್ಧೆಗಳು ಭಾರತೀಯ ಒಲಿಂಪಿಕ್ಸ್ ಅಸೋಸಿಯೇಶನ್‌ನ ಪ್ರಾಯೋಜಕತ್ವದಲ್ಲಿ ನಡೆದಿರಬೇಕು ಅಥವಾ ಅದರಿಂದ ಗುರುತಿಸಲ್ಪಟ್ಟ ಅಂಗ ಸಂಸ್ಥೆಗಳ ವತಿಯಿಂದ ನಡೆಸಿರುವ ಕ್ರೀಡಾಕೂಟಗಳಾಗಿರಬೇಕು.
4. ಅರ್ಜಿಯೊಂದಿಗೆ ತಮ್ಮ ಇತ್ತೀಚಿನ ಸಾಧನೆಯ ದಾಖಲೆಗಳ ಎಲ್ಲಾ ಯಥಾಪ್ರತಿ, ತಮ್ಮ ವೈಯಕ್ತಿಕ ಪರಿಚಯ ಪರಿಚಯ, 1 ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಒದಗಿಸಬೇಕು.
5. ಮೇಲ್ಕಾಂಡ ಅರ್ಹತೆಯುಳ್ಳ ಅರ್ಜಿಗಳನ್ನು ಗೌ. ಕಾರ್ಯದರ್ಶಿ/ ಅಧ್ಯಕ್ಷರು ಕ್ರೀಡಾ ಸಮಿತಿ ಇವರಿಗೆ ನಮೂದಿಸಿ ಸಂಘದ ವಿಳಾಸಕ್ಕೆ ದಿನಾಂಕ 10.01.2017 ರ ಒಳಗಾಗಿ ತಲುಪುವಂತೆ ಸಲ್ಲಿಸಲು ಕೋರಲಾಗಿದೆ.
6. ಅರ್ಜಿದಾರರು ಕ್ರೀಡಾ ಸಾಧನಾ ಪ್ರಶಸ್ತಿಯ ಜೊತೆ ಕ್ರೀಡಾ ಪ್ರೋತ್ಸಾಹ ಧನ ಪಡೆಯಲು ಇಚ್ಛಿಸಿದಲ್ಲಿ ಪ್ರತ್ಯೇಕವಾಗಿ ನಮೂದಿಸತಕ್ಕದ್ದು, ಅಂತಹ ಅರ್ಜಿಗಳನ್ನು ಮಾತ್ರ ಪ್ರೋತ್ಸಾಹ ಧನ ನೀಡಲು ಪರಿಗಣಿಸಲಾಗುವುದು.
7. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

# ಎಲ್ಲಿ ಹೋಯಿತು ಬಂಟರ ಸಂಸ್ಕೃತಿ ?



ನಾಗರಾಜ ಶೆಟ್ಟಿ, ಕೆ

ಈ ಪ್ರಪಂಚದಲ್ಲಿ ಮೂರು ದಿನದ ಬದುಕಿಗಾಗಿ ಮಾನವ ಏನೆಲ್ಲಾ ಕಸರತ್ತು, ಹೋರಾಟ, ಜಂಜಾಟ ಮಾಡುತ್ತಾ ಕಾಲ ಕಳೆಯುತ್ತಾನೆ ಅನ್ನುವುದು ಕಾಲ್ಪನಿಕ ವಿಷಯವಲ್ಲ, ಕಣ್ಣ ಮುಂದೆ ನಡೆಯುತ್ತಿರುವ ನಿರಂತರ ಕ್ರಿಯೆ. ನಿಜ ಜೀವನದ ವಿಧಿಯಾಟಕ್ಕೆ ತಲೆಬಾಗಿ ಅನಿವಾರ್ಯತೆಯ ದೈನಂದಿನ ಬದುಕಿನಲ್ಲಿನ ಜೀವನ ಚಕ್ರಕ್ಕೆ ಆಸೆ–ಆಕಾಂಕ್ಷೆಗಳನ್ನು ಒತ್ತೆಯಿಟ್ಟು, ಏಕಾಂಗಿ ಜೀವಕ್ಕಲ್ಲದೇ ತನ್ನನ್ನು ನಂಬಿಕೊಂಡು ಬಂದ, ಜೀವನ ಹಂಚಿಕೊಳ್ಳುವ ಮಡದಿಗಾಗಿ, ಭವಿಷ್ಯತ್ತಿನ ಮಕ್ಕಳಿಗಾಗಿ, ಹೆತ್ತ ತಂದೆ–ತಾಯಿಗಾಗಿ ಊರು–ಕೇರಿ–ದೇಶ ಬಿಟ್ಟು ದುಡಿಯುವ ಜೀವಕ್ಕೆ ನೆಮ್ಮದಿ ಯಾವಾಗ ಅನ್ನುವುದಕ್ಕೆ ಈಗೀಗ ಉತ್ತರ ಸಿಗುತ್ತಿದೆ? ಬದುಕು ಇಂದು ಗತಕಾಲದಂತೆ ನಂಬಿಕೆ, ಪ್ರೀತಿ, ವಿಶ್ವಾಸ, ಗೌರವದ ತಳಹದಿಯ ಮೇಲೆ ನಿಂತುಕೊಂಡಿಲ್ಲ. ಹೇಳಿಕೊಳ್ಳಲು ಒಂದೂರು, ಬದುಕು ಕಟ್ಟಿಕೊಳ್ಳಲು ಇನ್ನೊಂದು ಊರು. ನಂತರ ಅಲೆಯುತ್ತ ಬಂದು ನೆಲೆ ನಿಲ್ಲುವುದು ಮತ್ತೊಂದು ಊರು. ಮಧ್ಯೆ ಏಕತಾನತೆ ಮರೆಯಲು ಇನ್ನೊಂದಿಷ್ಟು ಊರುಗಳ ಸುತ್ತಾಟ.

ಹುಟ್ಟಿದೂರು, ಬದುಕುತ್ತಿರುವ ಊರುಗಳನ್ನೇ ತೆಗೆದುಕೊಳ್ಳಿ, ಎರಡು ಊರುಗಳ ಮಧ್ಯೆ ಮೈಲುಗಳ ಅಂತರ. ಆದರೆ ಮನಸ್ಸು–ಮನಸ್ಸುಗಳು ದೂರವಾದವಾ ಇಂದು? ಹುಟ್ಟಿದ ಹಳ್ಳಿಯ, ಪಟ್ಟಣವ ಬಿಟ್ಟು ಬಂದ ಮಾತ್ರಕ್ಕೆ ಬಾಂಧವ್ಯವನ್ನೂ ಬಿಟ್ಟು ಬಿಡುವಷ್ಟು ದೂರವಾಗಬೇಕಾ? ಬದುಕಿನ ಜಂಜಾಟದ ನಡುವೆ ಎಲ್ಲೋ ಒಮ್ಮೊಮ್ಮೆ ಕ್ಷಣಮಾತ್ರ ನೆನಪಾಗುವ ಊರು. ಈ ನೆನಪುಗಳು, ಅವು ಬಾಲ್ಯದ ಸವಿನೆನಪುಗಳೋ, ಹದಿಹರೆಯದ ಸಿಹಿ ನೆನಪುಗಳೋ, ಊರು ಬಿಟ್ಟು ಬರುವಾಗ ಕಣ್ಣಂಚಿನ ಹನಿಯ ನೆನಪುಗಳೋ, ಕನಸುಗಳ ಲೋಕವೋ ಅಂಗ ಭಾಸವಾಗುವುದಿಲ್ಲ. ಸವಿನೆನಪುಗಳನ್ನು ಬಿಚ್ಚಿಡಲು, ಬಾಂಧವ್ಯದಲ್ಲಿ ಎಂದೋ ಉಳಿದ್ದ ಕಹಿ ನೆನಪನ್ನು ಬಿಚ್ಚಿಡಲು ಆಗಾಗ ಒಗ್ಗೂಡುವಿಕೆಯಿಂದ ಸಾಧ್ಯ. ನಮ್ಮೆಲ್ಲರ ಆಲೋಚನೆ, ಚಿತ್ತ ಒಮ್ಮೆ ಕಳೆದುಹೋದ ಬದುಕಿನ ಪುಟಗಳತ್ತ ಹೆಜ್ಜೆ ಹಾಕುತ್ತದೆ. ನಾವೆಷ್ಟೇ ಬೇಡ ಅಂದುಕೊಂಡರೂ ಕೂಡಾ ಆ ಪುಟಗಳು ನಮ್ಮನ್ನು ಬೇರೊಂದು ಜೀವನಕ್ಕೆ ಕೊಂಡೊಯ್ಯುತ್ತದೆ.

ಅಜ್ಜ–ಅಜ್ಜಿ ಎಂದರೆ ಯಾರಿಗಿಷ್ಟವಿಲ್ಲ. ಅಜ್ಜ–ಅಜ್ಜಿಯ ಕಿರಿಕಿರಿಗಳನ್ನೆಲ್ಲಾ ಸಹಿಸಿಕೊಂಡು ಮೊಮ್ಮಕ್ಕಳು ಅವರನ್ನು ಪ್ರೀತಿಸುತ್ತಾರೆ. ಅವರೂ ಅಷ್ಟೇ, ಮೊಮ್ಮಕ್ಕಳ ಎಲ್ಲಾ ಕೀಟಲೆಗಳನ್ನೂ ಸಹಿಸಿಕೊಂಡು ಅವರನ್ನು ಪ್ರೀತಿಸುತ್ತಾರೆ. ಅಪ್ಪ–ಅಮ್ಮನ ಶಿಸ್ತಿನ ಪರಿಧಿಗಳನ್ನು ಮೀರಿದಾಗ ಶಿಕ್ಷೆಯಾಗದಂತೆ ಕಾಪಾಡುವುದು ಅಜ್ಜ ಅಥವಾ ಅಜ್ಜಿ. ಎಲ್ಲರೂ ಬದುಕಿನ ಒಂದಲ್ಲಾ ಒಂದು ಕಾಲಘಟ್ಟದಲ್ಲಿ ಈ ಹಿರಿಯರ ಬೆಚ್ಚನೆಯ ಪ್ರೀತಿಯನ್ನು ಅನುಭವಿಸಿರುತ್ತೇವೆ. ಇದರಲ್ಲಿ ತಮಾಷೆಯಿರಬಹುದು. ಇದರಲ್ಲಿ ಸಣ್ಣ ಪುಟ್ಟ ಜಗಳಗಳಿರಬಹುದು. ಆದರೆ ಇಂದು ಕೂಡು ಕುಟುಂಬದ ಪರಿಧಿಯಿಂದ ನಾವೆಲ್ಲಾ ದೂರ ಸರಿಯುತ್ತಿರುವಾಗ ಅವಿಭಕ್ತ ಕುಟುಂಬದ ಪ್ರೀತಿಯಿಂದ ಮಕ್ಕಳು ವಂಚಿತರಾಗುತ್ತಿದ್ದಾರೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಪ್ರೀತಿಯ ದ್ಯೋತಕ, ಸಂಬಂಧಗಳು ಮರೆಯಾಗುತ್ತಿವೆ. ಮಕ್ಕಳು ಮಾನಸಿಕವಾಗಿ ಕುಬ್ಜರಾಗುತ್ತಿದ್ದಾರೆ. ಹೀಗಿರುವಾಗ ಮಕ್ಕಳು ಇಂದು ಅಡ್ಡ ದಾರಿಯನ್ನು ಹಿಡಿಯುತ್ತಿರುವುದು ಸಹಜವೇ ತಾನೆ?

ಇಂದು ಮಕ್ಕಳು ಸ್ವಲ್ಪ ಬುದ್ಧಿ ಬೆಳೆಯುತ್ತಲೇ ಏಕಾಂತವನ್ನು ಬಯಸುತ್ತಿದ್ದಾರೆ. ಮಕ್ಕಳಿಗೆ ಬೇಕು ಬೇಕಾದ್ದನ್ನು ಕೊಡುತ್ತಿದ್ದೇವೆ ಎಂಬ ತರಾತುರಿಯಲ್ಲಿ ಅವರಿಗೇನು ಬೇಕು–ಬೇಡ ಎಂಬುದನ್ನು ಹಿರಿಯರಾದ ನಾವು ಮರೆಯುತ್ತಿದ್ದೇವೆ. ಕೈಗೊಂದಿಷ್ಟು ಸಂಪಾದನೆ ಬರಲು ಸಾಧ್ಯವಾದರೆ ಹೆತ್ತವರನ್ನೇ ಮರೆಯುವ ಅಥವಾ ಮನೆಯಿಂದ ಹೊರದಬ್ಬುವ ಸಂಸ್ಕೃತಿ ಮಕ್ಕಳಲ್ಲಿ ಇಂದು ಬೆಳೆಯುತ್ತಿರುವುದು ಅಪಾಯಕಾರಿ ಸಂಸ್ಕೃತಿಯಾಗಿ ಗುರುತಿಸಬಹುದಾಗಿದೆ. ಹಿರಿಯರಾದವರು ಕೂಡಾ ದುಡಿಯುವ ತುಡಿತದಲ್ಲಿ ತನ್ನನ್ನು ಅವಲಂಬಿಸಿರುವವರ ಬಗೆಗಿನ ಅಭಿರುಚಿ, ಆಸೆ–ಆಕಾಂಕ್ಷೆಗಳು, ನಿರೀಕ್ಷೆಗಳು, ಬೇಕು–ಬೇಡಗಳನ್ನು ತಿಳಿದುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಹಾಗಿರುವಾಗ ಎಲ್ಲಿ ಹೆಜ್ಜೆ ತಪ್ಪುತ್ತಾರೋ, ಎಲ್ಲಿ ಮನಸ್ಸನ್ನು ಕಲುಷಿತಗೊಳಿಸಿಕೊಳ್ಳುತ್ತಾರೋ ಅನ್ನುವ ಪರಿವೆಯೇ ಇಲ್ಲದೆ ತನ್ನಿಷ್ಟಕ್ಕೆ ತಾನು ಇದ್ದು ಬಿಟ್ಟರೆ ಮುಂದಾಗುವ ಊಹಿಸದ ಅನಾಹುತಗಳಿಗೆ ಯಾರು ಹೊಣೆಗಾರರು ಅನ್ನುವುದೇ ಪ್ರಶ್ನೆ. ಬದುಕಿನ ಜೀವನ ಚಕ್ರವೇ ಒಂದು ವಿಚಿತ್ರ ಅಲ್ಲವೇ.

ನಮ್ಮ ಸಮಾಜದ ಅಭಿವೃದ್ಧಿ, ಒಗ್ಗಟ್ಟು, ಏಕತೆಯಲ್ಲಿ ಸಾಕಷ್ಟು ಕೊರತೆಗಳನ್ನು ನಾವು ಕಾಣುತ್ತಿದ್ದೇವೆ, ಯಾಕೆಂದರೆ ಯಾವುದೇ ಸಾಮಾಜಿಕ ಚಿಂತನೆಯಿಲ್ಲದೆ ತಮ್ಮ ತಮ್ಮಲ್ಲೇ ಕಾಲೆಳೆಯುವ ಪ್ರವೃತ್ತಿ ಇರುವುದೇ ನಮ್ಮ ದುರಂತ. ಸೌಹಾರ್ದ–ಸಹಕಾರ ಮನೋಭಾವ, ಸೌಜನ್ಯಕ್ಕಾದರೂ ಪ್ರೀತಿಸುವ, ಚಿಂತಿಸುವ ನಾಯಕತ್ವ ಈಗ ನಮ್ಮಲ್ಲಿಲ್ಲದೇ ಇರುವುದು ಕೂಡಾ ಬಂಟ ಸಮಾಜ ಇಂದು ಏನನ್ನೋ ಕಳಕೊಳ್ಳುವ ಸ್ಥಿತಿಯಲ್ಲಿದೆ ಎನ್ನುವುದನ್ನು ತೋರಿಸುತ್ತದೆ.

ಈ ಹಿನ್ನೆಲೆಯನ್ನು ಗಮನಿಸಿದಾಗ ನಮ್ಮ ಬಂಟ ಸಮಾಜದ ವ್ಯಕ್ತಿಯೊಬ್ಬರು, ತನ್ನ ಸತತ ಪರಿಶ್ರಮದ ಫಲವಾಗಿ ಬಡತನದಿಂದ ಮೇಲೆ ಬಂದು ಶ್ರೀಮಂತಿಕೆಯ ಅಲೆಯಲ್ಲಿ ತೇಲುತ್ತಿರುವಾಗ ತನ್ನವರಿಂದಲೇ ಮರಣ ತಂದುಕೊಂಡಿರುವುದು ಒಂದು ವಿಪರ್ಯಾಸವೇ ಸರಿ. ಈ ಪ್ರಕರಣ ನಮ್ಮ ಬಂಟರ ಸಮಾಜದಲ್ಲಿ ಅಪರೂಪದಲ್ಲಿ ಅಪರೂಪ ಅಂತಲೇ ಹೇಳಬೇಕು. ಈ ಒಂದು ಘಟನೆ ಬಂಟರ ಕುಲಕ್ಕೆ, ಬಂಟರ ಸಮುದಾಯಕ್ಕೆ ಬಂಟರ ಸಂಸ್ಕೃತಿಗೆ ಸವಾಲಾಗಿ ಪರಿಣಮಿಸಿದೆ. ಬಂಟರ ಶ್ರೀಮಂತಿಕೆಯ ಪರಂಪರೆಯಲ್ಲಿ ಇದೊಂದು ಕಪ್ಪು ಚುಕ್ಕೆಯಾಗಿ ಇತಿಹಾಸ ಸೇರುತ್ತದೆ ಅನ್ನುವುದು ದುರಂತವೇ ಸರಿ.

ತಂದೆಯ ಮಾತಿಗೆ ಬೆಲೆಕೊಟ್ಟು ಬಡ ಹುಡುಗಿಯನ್ನು ಸಂತೋಷದಿಂದ ಒಪ್ಪಿ ಮದುವೆ ಮಾಡಿಕೊಂಡು ಸುಮಾರು 20–30 ವರ್ಷ ಸಂಸಾರ ಮಾಡಿದ ಕುಟುಂಬದಲ್ಲಿ ಬಿರುಗಾಳಿ ಬರಲು ಕಾರಣವಾದರೂ ಏನು? ಸಾವು ಬಂದಿದ್ದಾದರೂ ಹೇಗೆ? ಬಡವರ ಮನೆಯ ಹುಡುಗಿಯಾದರೆ ಮಗನಿಗೆ ಪ್ರೀತಿ ಉಣಿಸಿ ಸಲಹುತ್ತಾಳೆ ಅಂತ ತಂದೆಯ ಆಸೆಗೆ, ಗೌರವಕ್ಕೆ ಕಟ್ಟುಬಿದ್ದು ಮದುವೆಯಾಗಿ ಸುಖ ಸಂಸಾರದಲ್ಲಿರುವಾಗಲೇ ಅವರ ಕನಸಿನ ಬೃಹತ್ ಬಂಗಲೆಯಂತಿರುವ ಮನೆಯಲ್ಲಿಯೇ ಹೆಣವಾಗಿ ಹೋಗಿರುವುದು ಎಂಥ ವಿಪರ್ಯಾಸವಲ್ಲವೇ? ತಾನೇ ಸಾಕುತ್ತಿರುವ ಗಿಣಿ ಹದ್ದಾಗಿ ಬಂದು ಕುಕ್ಕುತ್ತದೆ ಅನ್ನುವ ಗೊಡವೇ ಇಲ್ಲದೆ ಬದುಕುತ್ತಿದ್ದ, ಸಪ್ತಪದಿ ತುಳಿದು ಜೀವನ ಪರ್ಯಂತ ಬಾಳಿ ಬದುಕಬೇಕಾದವರೆ ದಾರಿ ತಪ್ಪಿದರೆ ನಂಬಿಕೆ, ವಿಶ್ವಾಸ, ಪ್ರೀತಿ–ಪ್ರೇಮ, ಅನ್ಯೋನ್ಯ ದಾಂಪತ್ಯ ಜೀವನಕ್ಕೆ ಅರ್ಥ ಎಲ್ಲಿದೆ?

ಹಾಗಿದ್ದರೆ ತಾನು ಮಾಡಿಟ್ಟ ಸಂಪತ್ತು ಯಾರಿಗೆ? ಯಾಕೆ ಅನ್ನುವ ಪ್ರಶ್ನೆಗೆ ಉತ್ತರಿಸುವವರೇ ಇಲ್ಲವಾದರೇ ಊಹೆಗೆ ನಿಲುಕದ ಪ್ರಶ್ನೆಗೆ ಉತ್ತರಿಸುವುದಾದರೂ ಹೇಗೆ? ಹಾಗಿದ್ದರೆ ಇಂದು ಗಂಡ–ಹೆಂಡತಿ–ಮಕ್ಕಳು ಇಂಥ ಪವಿತ್ರವಾದ ಸಂಬಂಧ ಬರೀ ಹಣಕ್ಕಾಗಿ, ಆಸ್ತಿ–ಸಂಪತ್ತಿಗಾಗಿಯೇ ಇರುವುದಾದರೆ ನಾವು ಇದನ್ನೆಲ್ಲಾ ಯಾಕೆ, ಯಾರಿಗಾಗಿ ಮಾಡಬೇಕು ಅನ್ನುವ ತರ್ಕಬದ್ಧವಾದ ಪ್ರಶ್ನೆಗಳು ಮೂಡುವುದು ಸಹಜವಲ್ಲವೇ?

ಬಡಸ್ಥಿತಿಯ ಹಿನ್ನಲೆಯಲ್ಲಿ ಇಂಥಾ ಘಟನೆಗಳು ಬಂಟರ ಸಮಾಜದಲ್ಲಿ ನಡೆಯದಿದ್ದರೂ, ಸಾಮಾಜಿಕ ತಳಹದಿಯಲ್ಲಿ ಇದೊಂದು ಸಹಜವಾಗಿ ದೇಶಾದ್ಯಂತ ಇಂದು ಘಟಿಸುತ್ತಿದೆ. ನಮ್ಮ ನೈಜ ಸಂಸ್ಕೃತಿ ಇಂದು ಯಾವ ಮಟ್ಟಕ್ಕೆ ತಲುಪಿದೆ ಅನ್ನುವುದಕ್ಕೆ ಈ ಘಟನೆಯೊಂದು ಸಾಕ್ಷಿಯಲ್ಲವೇ? ಇದರ ಹಿಂದೆ ಯಾವುದೇ ಕಾರಣಗಳಿದ್ದರೂ ಈ ಮಟ್ಟಕ್ಕೆ ಬಂಟರ ಶ್ರೀಮಂತ ಕುಟುಂಬ ಇಳಿದಿರುವುದು ನಾಚಿಕೆಗೇಡಿನ ಸಂಗತಿಯಲ್ಲವೇ? ಹೀಗಿರುವಾಗ ಮುಂದಿನ ನಮ್ಮ ಪೀಳಿಗೆಗೆ ನಾವು ಯಾವ ಸಂದೇಶವನ್ನು ನೀಡುತ್ತಿದ್ದೇವೆ.

ಎಲ್ಲಿ ನಾವು ದಾರಿ, ತಾಳ ತಪ್ಪುತ್ತಿದ್ದೇವೆ? ಎಲ್ಲಿ ನಾವು ಜೀವನದ ಮೌಲ್ಯವನ್ನು ಕಳೆದುಕೊಳ್ಳುತ್ತಿದ್ದೇವೆ? ಮೌಲ್ಯಯುತವಾದ ವಿದ್ಯಾಭ್ಯಾಸದ ಕೊರತೆಯೇ? ವೈವಾಹಿಕ ಸಂಬಂಧದ ಹೊಂದಾಣಿಕೆ ಕೊರತೆಯೇ? ಶ್ರೀಮಂತಿಕೆಯ ದುಸ್ಸಾಹಸವೇ? ದೈವ–ದೇವರುಗಳ ಮೇಲಿನ ಭಯ ಭಕ್ತಿಯ ಕೊರತೆಯೇ? ಮಿತಿ ಮೀರಿದ ಆಸೆ–ಆಕಾಂಕ್ಷೆಗಳೇ, ದುರಾಸೆಯೇ, ಅಸಂತೃಪ್ತಿಯೇ ಯಾವುದು ಅನ್ನುವುದನ್ನು ಇಂದಿನ ಕಾಲಘಟ್ಟದಲ್ಲಿ ವಿಮರ್ಶಿಸಬೇಕಾಗಿದೆ.

ಈಗ ನಿಜವಾದ ಪ್ರಶ್ನೆ ಏನೆಂದರೆ ಹುಟ್ಟಿದ ತಪ್ಪಿಗಾಗಿ ಬದುಕಿಗಾದರೂ ಬದುಕಬೇಕಲ್ಲವೇ? ಚಿನ್ನ–ಬೆಳ್ಳಿ, ಆಸ್ತಿ–ಪಾಸ್ತಿ, ಗೌರವ–ಪ್ರತಿಷ್ಠೆ ಗಳಿಸಬೇಕು, ಉಳಿಸಬೇಕು, ಬೆಳೆಸಬೇಕು ಅನ್ನುವ ಹಂಬಲ ಮಾನವ ಸಹಜವಾಗಿ ಇರುವಾಗ ಸುಮ್ಮನೇ ಕೂರಲು ಸಾಧ್ಯವೇ? ಸುಖ ಶಾಂತಿ ನೆಮ್ಮದಿಯಾಗಿ ಬದುಕಲು ಹಣ ಬೇಕು ಅನ್ನುವ ಅತೀವ ತುಡಿತವೇ ಈ ಎಲ್ಲಾ ದುರಂತಗಳಿಗೆ ಕಾರಣವಾಗುತ್ತಿರುವುದು ಬೇಸರದ ಸಂಗತಿ. ಹಣವೇ ಎಲ್ಲವೂ ಅಲ್ಲ ಅನ್ನುವುದನ್ನು ಪ್ರತಿಯೊಬ್ಬರೂ ಅರಿತರೆ ಜೀವನ ತೃಪ್ತಿದಾಯಕವಾಗಬಲ್ಲುದು. ಹಣವಂತರೆಲ್ಲ ಹೃದಯ ಶ್ರೀಮಂತರಲ್ಲ, ಬಡವರೆಲ್ಲ ಅಸಂತೃಪ್ತರಲ್ಲ, ಹೀಗಿರುವಾಗ ಬಡತನ–ಸಿರಿತನ ಎರಡೂ ಅವರವರ ಮನಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ ಅನ್ನುವುದು ಅಷ್ಟೇ ಸತ್ಯ.

ಗುಣ ಮತ್ತು ಕುಲ ನಮ್ಮ ಸಮಾಜದಲ್ಲಿರುವ ವೈವಾಹಿಕ ಸಂಬಂಧಕ್ಕೆ ಬೆಸೆಯುವ ಎರಡು ಪ್ರಮುಖ ಸಂಗಮಗಳು. ಇದರಲ್ಲಿ ಒಂದು ಅಂಶ ಹೆಚ್ಚು ತಪ್ಪಿದರೂ ನಮ್ಮ ಸಮಾಜ ಮುರಿಯುತ್ತದೆ. ಆ ದೃಷ್ಟಿಯ ಹಿನ್ನಲೆಯಲ್ಲಿ ನಮ್ಮ ಸಂಸ್ಕೃತಿಯು ಬೆಳೆದು ಬಂದಿದೆ. "ಗುಣ ನೋಡಿ ಹೆಣ್ಣು ಕೊಡು – ಕುಲ ನೋಡಿ ಗಂಡು ತಾ" ಅನ್ನುವ ಗಾದೆಯ ಪ್ರತಿಪಾದನೆ ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿದೆ. ಅಳಿಯ ಸಂತಾನದ ಚೌಕಟ್ಟಿನಲ್ಲಿ ನಮ್ಮ ಸಮಾಜದ ಸಂಸ್ಕೃತಿ ಅತ್ಯುತ್ತಮ ಮಟ್ಟದಲ್ಲಿ ತನ್ನದೇ ಆದ ಸ್ಥಾನಮಾನ, ಗೌರವ, ಪ್ರತಿಷ್ಠೆ ಇಲ್ಲಿಯವರೆಗೆ ಉಳಿಸಿ ಬೆಳೆಸಿಕೊಂಡು ಬಂದಿರುವುದು ನಮ್ಮೆಲ್ಲರ ಹೆಮ್ಮೆ ಅಂತ ಹೇಳಿಕೊಳ್ಳಬಹುದು. ನಾವು ನಂಬಿಕೊಂಡು ಬಂದ ದೈವ–ದೇವರುಗಳ ಅಭಯದಿಂದ ನಮ್ಮ ಸಂಸ್ಕೃತಿ ತನ್ನದೇ ಆದ ನೆಲೆಯಲ್ಲಿ ನೆಲೆ ನಿಂತಿದೆ.

ಇಂದು ಹಣಕ್ಕಾಗಿ ಎಲ್ಲವನ್ನೂ ಮರೆಯುತ್ತಿದ್ದೇವೆ. ಮಕ್ಕಳೊಂದಿಗೆ ಕಲೆತು, ಬೆರೆತು, ಸಂಬಂಧಿಕರೊಂದಿಗೆ ಕುಳಿತು ಹಳೆಯ ನೆನಪುಗಳನ್ನು ಮೆಲುಕು ಹಾಕಿದರೆ ಅದೇ ಮಕ್ಕಳ ಮುದುಡಿದ ಮನಕ್ಕೊಂದಿಷ್ಟು ಉಲ್ಲಾಸದ ಸಿಂಚನ ಇಲ್ಲದಿದ್ದರೆ ಮುಂದಾಗುವ ಅನಾಹುತಗಳಿಗೆ ನಾವೇ ಜವಾಬ್ದಾರರಾಗುವ ದಿನಗಳು ದೂರವಿಲ್ಲ. ಎಚ್ಚರ... ಎಚ್ಚರ... ಎಚ್ಚರ...!

# ಬಂಟರ ಸಂಘ ಬೆಂಗಳೂರು
## ಸಾಹಿತ್ಯ ಮತ್ತು ಪ್ರಕಾಶನ ಸಮಿತಿ
### ಸ್ಥಾಪಕರ ದಿನಾಚರಣೆ ಅಂಗವಾಗಿ

# ಪ್ರಬಂಧ ಸ್ಪರ್ಧೆ

ದಿನಾಂಕ : 08.01.2017
ಮಧ್ಯಾಹ್ನ 02.00 ಘಂಟೆ
ಸ್ಥಳ: ಸಂಘದ ಆವರಣ

1. ವಯೋಮಿತಿ : 18 ವರ್ಷದ ಒಳಗೆ
ವಿಷಯ/ Subject : **'ಪರಿಸರ ಸಂರಕ್ಷಣೆ' : ನಮ್ಮ ಹೊಣೆ**
**Environment protection is our responsibility**

2. ವಯೋಮಿತಿ : 18 ವರ್ಷ ಮೇಲ್ಪಟ್ಟು
ವಿಷಯ/ Subject : **'ಗರಿಷ್ಠ ಮುಖ ಬೆಲೆಯ ನೋಟು ನಿಷೇಧ' : ಸಾಧಕ – ಬಾಧಕಗಳು**
**De-monetization a boon or bane to Indian Economy**

**ಹೆಸರು ನೋಂದಾಯಿಸಲು ಕೊನೆಯ ದಿನಾಂಕ: 31.12.2016**

**ನಿಯಮಗಳು**

1. ಸ್ಪರ್ಧೆ ನಡೆಯುವ ದಿನಾಂಕ 08.01.2017, ಸಮಯ ಮಧ್ಯಾಹ್ನ 02.00 ಘಂಟೆ, ಸ್ಥಳ: **ಸಂಘದ ಆವರಣ**
2. ಸ್ಪರ್ಧೆಯು ಸಂಘದ ಸದ್ಯಸ್ಯರು ಮತ್ತು ಮಕ್ಕಳಿಗೆ ಮಾತ್ರ ಸೀಮಿತವಾಗಿರುತ್ತದೆ
3. ಪ್ರಬಂಧವು ಎರಡು ಪುಟಗಳಷ್ಟಿರಲಿ.
4. ಕಾಲಮಿತಿ : 30 ನಿಮಿಷಗಳು
5. ಸ್ಪರ್ಧಿಗಳು ತಮ್ಮ ಅರ್ಹ ವಯೋಮಿತಿಯಲ್ಲಿ ಯಾವುದೇ ಒಂದು ಭಾಷೆಯನ್ನು (ಕನ್ನಡ/ English) ಮಾತ್ರ ಆಯ್ಕೆ ಮಾಡಿಕೊಳ್ಳಬಹುದಾಗಿದೆ.
6. ಅಗತ್ಯವಿದ್ದಲ್ಲಿ ವಯೋಮಿತಿಯ ದಾಖಲೆಯನ್ನು ನೀಡತಕ್ಕದ್ದು, ಮೊಬೈಲ್ ಬಳಕೆಗೆ ಅವಕಾಶವಿರುವುದಿಲ್ಲ.
7. ಪ್ರಥಮ ಹಾಗೂ ದ್ವಿತೀಯ ಬಹುಮಾನ ವಿಜೇತ ಪ್ರಬಂಧಗಳನ್ನು ಸ್ನೇಹಚಿಂತನೆಯಲ್ಲಿ ಪ್ರಕಟಿಸಲಾಗುವುದು.
8. ದಿನಾಂಕ 26.01.2017 ರಂದು ನಡೆಯುವ ಸ್ಥಾಪಕರ ದಿನಾಚರಣೆಯ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ನೀಡಲಾಗುವುದು.
9. ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ.
10. ಹೆಸರು ನೊಂದಾಯಿಸಲು ಆಸಕ್ತರು ಅರ್ಜಿ ನಮೂನೆಯನ್ನು ಸಂಘದ ಕಛೇರಿ ಅಥವಾ ವೆಬ್‌ಸೈಟ್ www.buntsanghablr.com ನಲ್ಲಿ ಪಡೆಯಬಹುದು.

**ಸಂತೋಷ್ ಶೆಟ್ಟಿ ಜೆ.**
ಗೌ। ಕಾರ್ಯದರ್ಶಿ

**ಚಂದ್ರಹಾಸ ರೈ ಡಿ.**
ಅಧ್ಯಕ್ಷರು

**ಅಶೋಕ್ ಕುಮಾರ್ ಶೆಟ್ಟಿ ಎಸ್.**
ಚೇರ್‌ಮೆನ್, ಸಾಹಿತ್ಯ ಮತ್ತು ಪ್ರಕಾಶನ ಸಮಿತಿ

# BUNTS SANGHA BANGALORE

## PRIZES AND AWARDS

The following Prizes and Awards are available to achievers of excellence/ best outgoing Bunt student on various faculties during the year 2015-16

1. Mr. C.L Naik Memorial Award for the **Best Outgoing Engineering Student**
2. Dr. K.K Hegde Memorial Award For the **Best Outgoing Medical Student**
3. Mr. M. Sunder Ram Shetty Memorial Award for the **Best Outgoing Commerce Student**
4. Mrs. Ammanni Ramanna Shetty Memorial Award for the **Best All round Girl Student**
5. Mr. Charmakki Narayana Shetty Award for the **Best outgoing Law Student.**
6. Mrs. Akkayya N. Shetty Award for the **Best Outgoing Dental Student**
7. Mr. K.P Ramanna Shetty Award for the **Best B.Sc (Ag)/ P.U.C (Science) Student**
8. Mr. H.T Bhandary Award for the **Best Student in Sports**
9. Mr. P.S Thimmappa Shetty Memorial Award for Any **Achievement for Excellence**
10. Ms. Sheetal Krishnappa Memorial Award for a **Girl showing All-round Excellence**
11. Master Jayasheel G. Shetty Memorial Award for the Outstanding Student in B.E (Electronics) or any other branch of Engineering
12. Miss. Raksha Rai Memorial Award for **Excellence in Classical Music**
13. Mullad Lakshmi Sheenappa Shetty Award for the **Best outgoing student in Veterinary Science**
14. Smt. Kenjooru Nayakara Mane Doddakka Ananth Shetty Memorial Award for the **Best Outgoing Female Medical Student.**
15. Sri Maralimane Ananth Shetty Memorial Award for the **Best Outgoing Ophthalmologist" or any other Post Graduation in Medicine.**
16. Miss. Raksha M Shetty Memorial Award for **Excellence in Classical Dance.**
17. Sri. Mohandas N Hegde Memorial Awards for **Best Outgoing Law Student.**
18. Sri. Niddodi Premdas Shetty Memorial Award for All-round **Excellence Boy Rural Student.**
19. Kolkebail Nadumane Shrimathi Vanajakshi Karunakar Shetty Memorial Award for **Allround Excellence Girl Student.**
20. Vandar Thenkabettu Balakrishna Shetty Memorial Award for Highest Scoring Girl in Bachelor of **Commerce and pursuing Higher studies.**

Candidates eligible and desirous, who have completed their course during the current year may apply along with their personal details, attested copy of the marks card, recent photograph and telephone number, so as to reach the Sangha office on or before 10.01.2017. Selected candidates who attend the Founder's Day Celebration on 26.01.2016 will be honoured and handed over the cash prize along with the Award.

**Santhosh Shetty J.**
Hon. Secretary

**Chandrahas Rai D.**
President

**Ajith Hegde K.**
Convenor, Scholarship & Awards Committee

**Ramith B. Shetty**
Chairman, Scholarship & Awards Committee

## ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 17ನೇ ವಾರ್ಷಿಕೋತ್ಸವದ ಕರೆಯೋಲೆ

ಆಸ್ತಿಕ ಬಂಧುಗಳೇ,

ಸಂಘದ ಸಂಕೀರ್ಣದಲ್ಲಿರುವ "ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ"ದ 17ನೇ ವಾರ್ಷಿಕೋತ್ಸವವನ್ನು 2017ನೇ ಜನವರಿ, 19ನೇ ತಾರೀಖು ಗುರುವಾರದಂದು ಅದ್ದೂರಿಯಾಗಿ ವಿಶೇಷ ಪೂಜಾಲಂಕಾರದೊಂದಿಗೆ ನೆರವೇರಿಸಲು ನಿಶ್ಚಯಿಸಿರುತ್ತೇವೆ.

### ಕಾರ್ಯಕ್ರಮಗಳ ವಿವರ

| | | |
|---|---|---|
| ಬೆಳಿಗ್ಗೆ 8.00 ಗಂಟೆಗೆ | : | **ಅಭಿಷೇಕ ಮತ್ತು ಗಣಹೋಮ** |
| ಮಧ್ಯಾಹ್ನ 12.00 ಗಂಟೆಗೆ | : | **ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ** |
| ಮಧ್ಯಾಹ್ನ 1.00 ಗಂಟೆಗೆ | : | **ಅನ್ನಸಂತರ್ಪಣೆ** |
| ಮಧ್ಯಾಹ್ನ 2.30 ರಿಂದ | : | ಯಕ್ಷಗಾನ ಸಮಿತಿಯಿಂದ **ಯಕ್ಷಗಾನ** ಏರ್ಪಡಿಸಲಾಗಿದೆ. |

ಸಂಘದ ಸಂಕೀರ್ಣದಲ್ಲಿ ನಡೆಯುವ ಪೂಜಾ ಕಾರ್ಯಕ್ರಮಕ್ಕೆ ಭಕ್ತಾದಿಗಳಾದ ತಾವು ಕುಟುಂಬ ಸಮೇತರಾಗಿ ಆಗಮಿಸಿ ಶ್ರೀ ಮಹಾಗಣಪತಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತಾ, ತಮಗೆ ಆದರದ ಸ್ವಾಗತವನ್ನು ಕೋರುವ,

**ಪದಾಧಿಕಾರಿಗಳು. ಕಾರ್ಯಕಾರಿ ಸಮಿತಿ ಸದಸ್ಯರು. ಪ್ರಾರ್ಥನಾ ಮಂದಿರದ ಸಮಿತಿ ಸದಸ್ಯರು.**

**ವಿ.ಸೂ.: 'ಅಭಿಷೇಕ' ಮಾಡಿಸುವ ಭಕ್ತಾದಿಗಳು ರೂ. 101/–ನ್ನು ಮತ್ತು 'ಗಣಹೋಮ' ಮಾಡಿಸುವವರು ರೂ. 151/–ನ್ನು ಸಂಘದ ಕಛೇರಿ ಅಥವಾ ದೇವಸ್ಥಾನದಲ್ಲಿ ಪಾವತಿಸಿ ರಸೀದಿ ಪಡೆಯಬೇಕಾಗಿ ವಿನಂತಿ.**

## ಕಾರ್ಟೂನ್ ಕಲಾವಿದ ಹರಿಣಿ (ಹರಿಶ್ಚಂದ್ರ ಶೆಟ್ಟಿ)ರವರಿಗೆ ಸನ್ಮಾನ



ಕುಂದಾಪುರದ ಕೋಟಿರಿ ಲಕ್ಷ್ಮೀನರಸಿಂಹ ಕಲಾಮಂದಿರದಲ್ಲಿ ಕಾರ್ಟೂನ್ ಕುಂದಾಪುರ ಆಶ್ರಯದಲ್ಲಿ ನಡೆಯುತ್ತಿರುವ ಕಾರ್ಟೂನ್ ಹಬ್ಬದ ಎರಡನೇ ದಿನ ರವಿವಾರ ಬೆಳಗ್ಗೆ ಮಾಸ್ಟರ್ ವ್ಯಂಗ್ಯಚಿತ್ರ ಕಲಾವಿದರೊಂದಿಗೆ ಕನ್ನಡ ಪತ್ರಿಕೆಗಳು ಮತ್ತು ಕಾರ್ಟೂನ್ ಬಗ್ಗೆ ಮಾತುಕತೆಯ ಮಾಸ್ಟರ್ ಸ್ಟ್ರೋಕ್ ಕಾರ್ಯಕ್ರಮದಲ್ಲಿ ಮಂಗಳೂರಿನ ಹರಿಣಿ (ಹರಿಶ್ಚಂದ್ರ ಶೆಟ್ಟಿ) ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ರಂಗಕರ್ಮಿ ವಸಂತಬನ್ನಾಡಿ, ರಾಜಾರಾಮ್ ತಲ್ಲೂರು, ಜೇಮ್ಸ್ ವಾಜ್ (ತರಂಗ), ಪಂಜು ಗಂಗೊಳ್ಳಿ,ದಿನೇಶ್ ಕುಕ್ಕುಜಡ್ಕ (ವಿಜಯವಾಣಿ), ಉದಯ ಗಾಂವ್ಕರ್, ಚಂದ್ರಶೇಖರ್ ಶೆಟ್ಟಿ ಹಾಗೂ ಹಬ್ಬದ ನೇತೃತ್ವ ವಹಿಸಿದ ಸತೀಶ್ ಆಚಾರ್ಯ ಉಪಸ್ಥಿತರಿದ್ದರು

# REPORT ON ANNUAL ATHLETIC MEET – 2016-17
## RNS VIDYANIKETAN





